ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೨ ಸೆಪ್ಟಂಬರ್, ೨೦೦೧ ಸಂಚಿಕೆ ೨

ಎಲ್ಲರಂಥವರಲ್ಲ ಈ ವಿನೋಬಾ!

★

ನೀರಾ ಒಂದು ಪರಿಪೂರ್ಣ ಪೇಯ

ರೈತರ ಆಂದೋಲನ ಸ್ವಾಗತಾರ್ಹ

★

ನ್ಯೂ ಟ ನ್

★

ಜನಪದ ಕಾಳು ಬ್ಯಾಂಕುಗಳು

★

ಎರಡು ಎತ್ತುಗಳ ಕಥೆ

★

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೨ ಸಂಚಿಕೆ : ೨

ಸೆಪ್ಟಂಬರ್ ೨೦೦೧

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :

ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ: ೦೮೨೩೬ ೪೮೭೫೪

ಅಂತರಾಳದ ಗುಹೆಯು
ಕದತಟ್ಟಿ, ತಟ್ಟಿ....
ಹುಡುಕುತ್ತೇನೆ
ಪಿಸುಮಾತಿಗೆ ತಡಕುತ್ತೇನೆ
ನಲ್ಮೆ ಆಸರೆಗೆ
ಕಾತರಿಸುತ್ತೇನೆ
ಆತ್ಮೀಯ ಬೆಸುಗೆಗೆ
ಅರಸುತ್ತೇನೆ
ಸಂಬಂಧ ಸೆಲೆಗೆ
ಬಯಸುತ್ತೇನೆ
ದುಗುಡ ತೊಳೆಯುವ ಬೆಳಕನೆ
ಕಾಣದಾಗಿದೆ ಬೇಕಾದುದೊಂದು
ಕತ್ತಲ ಸುಳಿಯೊಳಗೆ
ದಿಗ್ಭ್ರಮೆ ಗರ್ಭದೊಳಗೆ
ಹೆಜ್ಜೆ ಊರಿದಲ್ಲಿ
ಪಾಚಿಗಟ್ಟಿದ ನೆಲ
ಜಾರಿಸುತ್ತಿವೆ ಸಂಬಂಧಗಳ
ಅಳಿಸಿವೆ ಸಿಹಿಬೆಸುಗೆಗಳ
ಕಾಲ ಚಕ್ರದಡಿಗೆ ಸಿಕ್ಕಿಯೂ
ಉಳಿದಿದೆ ಒಂಟಿತನ
ಪುಡಿಯಾಗದೆ ಬಂಡೆಯಂತೆ

ಕೆ. ರಾಜೇಶ್ವರಿ

ಚಂದಾದಾರರಲ್ಲಿ :-
ಚಂದಾ ಕಳುಹಿಸಿರುವ ಓದುಗರಿಗೆ,
ಕೃತಜ್ಞತೆಗಳು.
- ಪ್ರಕಾಶಕರು

ವಿಚಾರ ದೀಪ್ತಿ........

ನಮ್ಮ ನೆಲದ ಮೇಲೆ ಸಂಸ್ಕೃತಿಯ ಪ್ರತೀಕವಾಗಿ ಪಟ್ಟಣಗಳನ್ನು ಬೆಳೆಸುತ್ತೀರಿ. ಪಟ್ಟಣದೊಳಗೆ ನಿಮ್ಮದೇ ಆದ "ಹೊಸ" ಅನ್ನುವ ಸಂಸ್ಕೃತಿಯನ್ನು ಬೆಳೆಸುತ್ತೀರಿ. ಇದೆಲ್ಲಾ ನಮ್ಮ ಸುತ್ತ ಹಿರೀಕರ ಮೇಲೆ ಕಟ್ಟಿದ ಗೋರಿಗಳಾಗಿ ನಮಗೆ ಗೋಚರವಾಗುತ್ತವೆ. ನೀವು ಸೃಷ್ಟಿಸಿದ ಪಟ್ಟಣಗಳು ನಮ್ಮ ಕಣ್ಣುಗಳಿಗೆ ಬಟ್ಟೆ ಕಟ್ಟಿ ತೋರಿಸಿದ ಸೌಂದರ್ಯದ ಸೌಧಗಳಗಿರುತ್ತವೆ. ನೀವು ಕಟ್ಟಿದ ಕಣ್ಣಿನ ಬಟ್ಟೆ ಅತ್ತರೂ ಕಣ್ಣಿನಿಂದ ನೀರು ಜಿನುಗಲು ಸಾಧ್ಯವಾಗದಷ್ಟು ಬಿಗಿಯಾಗಿರುತ್ತದೆ. ಅಂತೂ ನಮ್ಮ ಅಳಲಿನ ಮೇಲೆ ನೀವು ಗೋರಿಗಳನ್ನು ಕಟ್ಟಿದಿರಿ ಎಂದು ನಾವು ಅಂದುಕೊಳ್ಳುತ್ತೇವೆ. ಇಂದ್ರಲೋಕವನ್ನು ಮೀರಿಸಿದ ಸೌಧಗಳನ್ನು ಎಂದು ನೀವು ಅಂದುಕೊಳ್ಳುತ್ತೀರಿ.

ಇಂಥ ಪಟ್ಟಣಗಳಲ್ಲಿ ಉಸಿರಾಡೋಣ ಎಂದರೆ ನಮಗೆ ಗಂಟಲು ಕಟ್ಟುತ್ತಿದೆ. ನೋಡೋಣ ಎಂದರೆ ಕಣ್ಣಿನ ಕತ್ತಲಾವರಿಸುತ್ತದೆ. ನುಡಿಯೋಣ ಎಂದರೆ ಮೂಕರಾಗುತ್ತೇವೆ. ಚಿಂತಿಸೋಣ ಎಂದರೆ ಕಲ್ಲಾಗುತ್ತೇವೆ. ನೀವು ಮಹಾಪುರುಷರು ನಿಮ್ಮೆಲ್ಲ ಅಭಿವ್ಯಕ್ತಿಗಳಿಗೆ ಇಂಥ ಪಟ್ಟಣಗಳನ್ನು ಕಟ್ಟಿದ್ದೀರಿ.

ನೀವು ನಿರ್ಮಿಸಿದ ಪಟ್ಟಣಗಳು ಕಣ್ಣು, ಕಿವಿ, ಮೂಗು, ಮತ್ತು ಹೃದಯವನ್ನು ಕಲ್ಲಾಗಿಸಿವೆ ವ್ಯಾಪಾರಿ ವ್ಯವಹಾರಿ ಕಲೆಯೇ ಹೃದಯವಾಗಿಬಿಟ್ಟಂಥ ದಿನಗಳು ಹೇಗೆ ದಿಢೀರನೇ ಬಂದೆರಗಿದವು ನೋಡಿ.

ಕೊನೆಯದಾಗಿ ನಿಮಗೆ ಹೇಳಬೇಕೆಂದಿರುವ ಒಂದು ಮಾತೆಂದರೆ ಬಿಳಿ ಮನುಷ್ಯ ಕೂಡ ಪ್ರಕೃತಿಯ ಒಂದು ಅಂಶ. ಪ್ರಾಕೃತಿಕ ಬದಲಾವಣೆಗಳಲ್ಲಿ ಬಿಳಿ ಮನುಷ್ಯ ಕೂಡ ನಿರಂತರ ಕಾಲದ ಒಂದು ಘಳಿಗೆಯಲ್ಲಿ ಅಸ್ಥಿರನಾಗಬಲ್ಲವನು ಅನ್ನುವುದನ್ನು ಮನದಟ್ಟು ಮಾಡಿಕೊಳ್ಳಿ.

—ರೆಡ್ ಇಂಡಿಯನ್ ನಾಯಕ ಸೆಟ್ಲ್ ೧೮೫೪ ರಲ್ಲಿ ಹೇಳಿದ್ದು

ಎಲ್ಲರಂಥವರಲ್ಲ ಈ ವಿನೋಬಾ!

– ಸುರೇಂದ್ರ ಕೌಲಗಿ

ವಿನೋಬಾ! ದೇಶದ ಸಮಸ್ಯೆಗಳಿಗೆ ಮೂಲ ಪರಿಹಾರವನ್ನು ಕಂಡು ಹಿಡಿದ ಬ್ರಹ್ಮಚಾರಿ, ಆದರ, ಅತ್ಯಂತ ಉದಾಸೀನತೆಗೆ ಒಳಗಾದ ಬ್ರಹ್ಮರ್ಷಿ! "ನೀನು ಮಹಾನ್ ಸೇವೆಯ ನಿಮಿತ್ತನಾಗುವೆ........ ಭಗವಂತ ನಿನ್ನನ್ನು ದೀರ್ಘಾಯುಷ್ಯವನ್ನಾಗಿ ಮಾಡಲಿ. ಭಾರತದ ಉನ್ನತಿಗಾಗಿ ನಿನ್ನ ಉಪಯೋಗವಾಗಲಿ!" –ಎಂದು ಮಹಾತ್ಮಾ ಗಾಂಧೀಜಿ ಹೇಳಿದ ಮಾತನ್ನು ನೂರಕ್ಕೆ ನೂರು ಪಾಲಿಸಿದ ವ್ಯಕ್ತಿ ಇಂದು "ಗಾಂಧೀ ಭಾರತದಲ್ಲಿ" ನೂರಕ್ಕೆ ನೂರು ಮರೆತು ಹೋಗಿರುವ ಅಹಿಂಸಕ ಸೇನಾನಿ; ಎರಡು ಮಹಾಯುದ್ಧಗಳು ಆಗಿ ವಿಶ್ವ ಅತ್ಯಂತ ಭೀಕರವಾದ ಪ್ರಾಣಹಾನಿ, ಆಸ್ತಿಹಾನಿ ಅನುಭವಿಸಿದ್ದರೂ ಸಹ ಭಯಾನಕವಾದ ಶಸ್ತ್ರಾಸ್ತ್ರಗಳ ಪೈಪೋಟಿಯಲ್ಲಿಯೇ ವಿಶ್ವ ತೊಡಗಿರುವಂಥ ಕಾಲದಲ್ಲಿ ವಿನೋಬಾ ಅಂದಿನ ಪೂರ್ವ–ಪಾಕಿಸ್ತಾನವೂ ಸೇರಿದಂತೆ ಇಡೀ ಭಾರತವನ್ನು ೧೩ ವರ್ಷ ೧ ತಿಂಗಳು ೩ ದಿನಗಳ ಕಾಲ ಕಾಲ್ನಡಿಗೆಯಲ್ಲಿ ಲಕ್ಷಾಂತರ ಕಿಲೋ ಮೀಟರ್ ಯಾತ್ರೆ ಮಾಡಿ ೪೨, ೨೭, ೪೭೬ ಎಕರೆ ಭೂಮಿಯನ್ನು ಪ್ರೇಮ ಶಕ್ತಿಯ ಮೂಲಕ ದಾನ ಪಡೆದು ಅದನ್ನು ಆಯಾ ಗ್ರಾಮದ ಭೂಹೀನರಿಗೆ ಉತ್ಪಾದನೆಯ ಸಾಧನವನ್ನಾಗಿ ವಿತರಿಸಿದ ಸಮಾಜ ಸೇವಕ ಇಂದು ಗಮನಕ್ಕಿಲ್ಲ. ಗ್ರಾಮಗಳ ಪುನರ್‌ಚನೆಯ ಅಗತ್ಯ, ಗ್ರಾಮ ಸ್ವರಾಜ್ಯ, ಗ್ರಾಮ ಸ್ವಾವಲಂಬನೆ ಇತ್ಯಾದಿ ವಿಚಾರಗಳನ್ನು ದೇಶದ ಮುಂದೆ ೭೧ ವರ್ಷಗಳ ಹಿಂದೆ ೧೯೨೩ ರಲ್ಲಿ ನಾಗಪುರದ ಕಾರಾಗೃಹದಲ್ಲಿ ಮಂಡಿಸಿದ್ದ ಸ್ವರಾಜ್ಯ ಶಾಸ್ತ್ರದ ರೂವಾರಿ ವಿನೋಬಾ ಇಂದಿನ ಪಂಚಾಯತಗಳಲ್ಲಿಯ ಕ್ಷುದ್ರ ರಾಜಕೀಯದಲ್ಲಿ ಕಣ್ಮರೆಯಾಗಿರುವಂಥ ಸ್ವರಾಜ್ಯದ ಚಿಂತಕ. ಪಾಕಿಸ್ತಾನದ ಜೊತೆ ಮೂರು ಯುದ್ಧಗಳು ನಡೆದು, ಇಂದೂ ಅವ್ಯಾಹತವಾಗಿ ಅಘೋಷಿತ ಯುದ್ಧ ನಡೆಯುತ್ತಿರುವಾಗ, ನಕ್ಸಲೀಯರಿಂದ ಹಿಂಸಾಮಯ ಕಾರ್ಯ ನಡೆಯುತ್ತಿರುವಾಗ, ಅಸ್ಸಾಂ ರಾಜ್ಯದಲ್ಲಿ ಬೋಡೊಗಳ ಹಿಂಸಾಕಾಂಡ ನಡೆಯುತ್ತಿರುವಾಗ, ದೇಶದ ತುಂಬೆಲ್ಲ ಕೊಲೆ, ಸುಲಿಗೆ ಇತ್ಯಾದಿಗಳು ನಡೆಯುತ್ತಿರುವಾಗ, ೧೯೫೭ರಲ್ಲಿ ಕೇರಳದಲ್ಲಿ "ಶಾಂತಿಸೇನೆ"ಯನ್ನು ಸ್ಥಾಪಿಸಿದ ಆತ್ಮಶಕ್ತಿಯ ಪ್ರತಿಪಾದಕ ವಿನೋಬಾ ಇಂದು ಹಿಂಸೆಯ ಅಗ್ನಿಯಲ್ಲಿ ಸಿಕ್ಕಿಹಾಕಿಕೊಂಡಿರುವ ಶಾಂತಿಸೈನಿಕ. ತತ್ವರಹಿತ ರಾಜಕಾರಣ, ಭ್ರಷ್ಟಾಚಾರ, ನಿಃಶಕ್ತಗೊಂಡಿರುವ ಪ್ರಜಾಪ್ರಭುತ್ವ, ದುರ್ಬಲಗೊಂಡಿರುವ ಆಡಳಿತ ವ್ಯವಸ್ಥೆ, ನಪುಂಸಕವಾಗಿ ಕುಳಿತಿರುವ ಜನತೆ, ಯಾವ ಸಿದ್ಧಾಂತವನ್ನೂ ಅರಿಯದ ರಾಜಕೀಯ ಪಕ್ಷಗಳು, ಕೈಗಾರಿಕೆಗಳ ಸಮೂಹದಲ್ಲಿ

ಸೂರ್ಯನಂತೆ ಇದ್ದ ಖಾದಿಯ ಅಸ್ತಂಗತ ಸ್ಥಿತಿ, ಕೆಲವರಲ್ಲೇ ಸಂಪತ್ತಿನ ಕ್ರೋಢೀಕರಣ, ನೈತಿಕತೆಯ ಆಧಾರವಿಲ್ಲದ ವಿಜ್ಞಾನದ ಬೆಳವಣಿಗೆ, ಅಸಮತೋಲನ ಸಮಾಜವನ್ನು ನಿರ್ಮಿಸುತ್ತಿರುವ ಶಿಕ್ಷಣ ಇಂಥ ಎಲ್ಲ ಸಾಮಾಜಿಕ-ರಾಜಕೀಯ-ಆರ್ಥಿಕ ಸಮಸ್ಯೆಗಳಿಗೆ ಪರಿಹಾರವಾಗಿ ೧೯೫೦ನೇ ಇಸ್ವಿಯಲ್ಲಿ, ಸ್ವಾತಂತ್ರ್ಯ ಬಂದ ಮೂರು ವರ್ಷಗಳಲ್ಲಿಯೇ ತಮ್ಮ ವಿಚಾರಗಳನ್ನು ತರ್ಕಬದ್ಧವಾಗಿಯೂ, ಗಣಿತ ಶಾಸ್ತ್ರಕ್ಕನುಗುಣವಾಗಿಯೂ, ವೈಜ್ಞಾನಿಕ ದೃಷ್ಟಿಯಿಂದಲೂ ಲೋಕಶಕ್ತಿಯು ಮೂರನೇ ಶಕ್ತಿಯಾಗಿ ಹೊರಹೊಮ್ಮಬೇಕೆಂದು ಪ್ರತಿಪಾದಿಸಿದ ವಿನೋಬಾ ಇಂದಿನ ಕ್ಷುಲ್ಲಕ ರಾಜಕಾರಣಗಳಲ್ಲಿ ಮರೆಮಾಚಲ್ಪಟ್ಟಿರುವ ರಾಜ್ಯಶಾಸ್ತ್ರದ ಚಿಂತಕ. ಇಂದು ವಿಶ್ವದ ಎಲ್ಲ ರಾಷ್ಟ್ರಗಳಲ್ಲಿ ಮತ್ತು ಮುಖ್ಯವಾಗಿ ಭಾರತದಲ್ಲಿ ಸ್ತ್ರೀಯರು ಶೋಷಣೆಗೆ, ಅಗೌರವಕ್ಕೆ ತೀವ್ರವಾಗಿ ತುತ್ತಾಗುತ್ತಿರುವಾಗ ಸ್ತ್ರೀಶಕ್ತಿಯ ಮಹಿಮೆಯನ್ನು ಸಾರ್ವಜನಿಕ ಕ್ಷೇತ್ರಕ್ಕೆ ೧೯೪೬ ನಷ್ಟು ಹಿಂದಿನಿಂದಲೇ ಪರಿಚಯಿಸಿ ಸ್ತ್ರೀಯರ ಆತ್ಮೋನ್ನತಿಗಾಗಿ 'ಬ್ರಹ್ಮವಿದ್ಯಾ ಮಂದಿರ'ವನ್ನು ಸ್ಥಾಪಿಸಿದ ವಿನೋಬಾ ಇಂದಿನ ಮಹಿಳಾ ಜಾಗೃತಿ ಆಂದೋಲನದಲ್ಲಿ ಸ್ಥಾನವನ್ನೇ ಕಾಣದ ಸ್ತ್ರೀ ಸ್ವಾತಂತ್ರ್ಯವಾದಿ. ಕಾಯಕವೆಲ್ಲ ಪೂಜ್ಯ ಎಂಬ ವಿಚಾರವನ್ನು ಭಂಗಿಯಾಗಿ, ಕಾರ್ಮಿಕನಾಗಿ, ರೈತನಾಗಿ, ನೂಲುಗಾರನಾಗಿ, ನೇಕಾರನಾಗಿ ಪ್ರತ್ಯಕ್ಷ ಆಚರಣೆಯನ್ನೂ ಮಾಡುತ್ತ ಜೊತೆಯಲ್ಲಿಯೇ ವೇದ - ಉಪನಿಷತ್ತುಗಳ ಅಧ್ಯಯನ ಮಾಡುತ್ತ ಓರ್ವ ಋಷಿಯಂತೆ ಜೀವನ ನಡೆಸಿ ಶ್ರಮಜೀವನ ಮತ್ತು ಬುದ್ಧಿಜೀವನ ಇವೆರಡರಲ್ಲಿ ಸಮನ್ವಯವಿರಬೇಕೆಂದು ಪ್ರತಿಪಾದಿಸಿದ ವಿನೋಬಾ ಕಾರ್ಮಿಕರಿಂದಲೂ, ಬುದ್ಧಿಜೀವಿಗಳಿಂದಲೂ ನೆನೆಯಲ್ಪಡದೇ ಇರುವ ಸಮತಾವಾದಿ. ದಲಿತರಿಗೂ, ಅಸ್ಪೃಶ್ಯರಿಗೂ ದೇವಾಲಯಗಳಲ್ಲಿ ಪ್ರವೇಶ ಇರಬೇಕೆಂಬ ವಿಚಾರಕ್ಕಾಗಿ ೧೯೨೫ರಲ್ಲಿ ಕೇರಳದ ವೈಕೊಂ ಸತ್ಯಾಗ್ರಹದಲ್ಲಿ, ನಂತರ ೧೯೫೪ ರಲ್ಲಿ ಬಿಹಾರದ ದೇವಘರ ದೇವಸ್ಥಾನದ ಸತ್ಯಾಗ್ರಹದಲ್ಲಿ ಭಾಗವಹಿಸಿ ಹೋರಾಡಿದ ವ್ಯಕ್ತಿ ಇಂದಿನ ದಲಿತರ ಮನಃಪಟಲದಿಂದ ದೂರವಾದ ಅಂತ್ಯೋದಯದ ಪ್ರತಿಪಾದಕ; ಶಿಕ್ಷಣ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು - ಈ ವಿಷಯವಾಗಿ ಬಹಳ ರಚನಾತ್ಮಕ, ಕ್ರಿಯಾಶೀಲ ಮತ್ತು ಪ್ರೇರಕ ವಿಚಾರಗಳನ್ನು "ಆಚಾರ್ಯ ಕುಲ" ಎಂಬ ಕಾರ್ಯಕ್ರಮದ ಅಡಿಯಲ್ಲಿ ಹೇಳಿದ ವಿನೋಬಾ ಇಂದಿನ ಗೊಂದಲಮಯ ಶಿಕ್ಷಣ ಕ್ಷೇತ್ರದಲ್ಲಿ ಮರೆತುಹೋದ ಶಿಕ್ಷಣ ತಜ್ಞ. ಸ್ವತಃ ತಾವು ಸಾಹಿತಿ ಎಂದು ಕೊಳ್ಳದಿದ್ದರೂ ಅತ್ಯಂತ ದೊಡ್ಡ ಅಧ್ಯಾತ್ಮ ಸಾಹಿತ್ಯರಚನೆಯನ್ನೂ, ಸಾಹಿತ್ಯ ಕುರಿತು ವ್ಯಾಪಕ ಚಿಂತನೆಯನ್ನೂ ಮಾಡಿದ್ದರೂ ನಮ್ಮ ದೇಶದ

ಸಾಹಿತಿಗಳಿಂದ ಮನ್ನಣೆ ಪಡೆಯದ ಹಿರಿಯ ಸಾಹಿತಿ ವಿನೋಬಾ; ೧೯೭೫ರಲ್ಲಿ ಇಂದಿರಾ ಗಾಂಧೀ ತುರ್ತುಪರಿಸ್ಥಿತಿಯನ್ನು ಜಾರಿಗೆ ತಂದಿದ್ದಾಗ ಅದನ್ನು "ಅನುಶಾಸನ ಪರ್ವವೆಂದು" ಕರೆದು ಬಹಳಷ್ಟು ತಪ್ಪಿತಾರ್ಥಕ್ಕೆ ತುತ್ತಾದ ವ್ಯಕ್ತಿ ಆಚಾರ್ಯ ವಿನೋಬಾ.

ಇಂಥ ಎಲ್ಲ ಪ್ರಕಾರದ ಗಗನ ಸದೃಶ ವ್ಯಕ್ತಿತ್ವವನ್ನು ಹೊಂದಿದ ವಿನೋಬಾರ ಜನ್ಮ ಇದೇ ಸೆಪ್ಟಂಬರ್ ೧೧ರಂದು ೧೮೯೫ರಲ್ಲಿ ಆಯಿತು. ಎಂಭತ್ತೇಳು ವರ್ಷಗಳಷ್ಟು ದೀರ್ಘವಾದ ಜೀವನವನ್ನು ಈಶಾವಾಸ್ಯೋಪನಿಷತ್ತಿನ **"ಕುರ್ವನ್ನೇವೇಹ ಕರ್ಮಾಣಿ ಜಿಜಿವಿಷೇತ್ ಶತಂ ಸಮಾ:, ಏವಂ ತ್ವಯಿ ನಾನ್ಯಥೇತೋಸ್ತಿ ನ ಕರ್ಮ ಲಿಪ್ಯತೇ ನರೇ"** ಎಂಬ ಈಶ್ವರಾರ್ಪಿತ ಕರ್ಮಯೋಗದ ಮಾರ್ಗದಲ್ಲಿ ನಡೆದು ೧೫-೧೧-೧೯೮೨ರಲ್ಲಿ ದೀಪಾವಳಿಯಂದು ಭಗವಾನ್ ಮಹಾವೀರ, ಸ್ವಾಮಿ ರಾಮತೀರ್ಥ ಮುಂತಾದ ಇನ್ನೂ ಹಲವಾರು ಸಂತರೂ, ಋಷಿಗಳೂ ಮೋಕ್ಷ ಹೊಂದಿದ ದಿನವೇ ಸಂತ ವಿನೋಬಾ ಕೂಡ ಇಹಲೋಕದಿಂದ ಮುಕ್ತಿ ಹೊಂದಿದರು.

೧೯೧೬ರಲ್ಲಿ ಮಹಾತ್ಮಾ ಗಾಂಧೀಜಿಯವರು ದೀನಬಂಧು ಆಂಡ್ರ್ಯೂಸ್ ಅವರೊಡನೆ ವಿನೋಬಾರ ಬಗ್ಗೆ ಹೀಗೆ ಹೇಳಿದ್ದರು, "ಆಶ್ರಮದ ದುರ್ಲಭ ರತ್ನಗಳಲ್ಲಿ ಇದೊಂದು. ತನ್ನ ಪುಣ್ಯದಿಂದ ಆಶ್ರಮವನ್ನು ಪಾವನಗೊಳಿಸಲು ಬಂದಿದ್ದಾನೆ, ಪಡೆಯಲು ಬಂದಿಲ್ಲ; ನೀಡಲು ಬಂದಿದ್ದಾನೆ".

ಮುಂದೆ ಒಂದು ಸಲ ಗಾಂಧೀ ವಿನೋಬಾಗೆ ಈ ರೀತಿ ಪತ್ರ ಬರೆದಿದ್ದರು, "ನಿನ್ನ ಪ್ರೇಮ ಮತ್ತು ಚಾರಿತ್ರ್ಯ ನನ್ನನ್ನು ಮೋಹದಲ್ಲಿ ಮುಳುಗಿಸಿಬಿಡುತ್ತದೆ. ನಿನ್ನ ಭಕ್ತಿ ಮತ್ತು ಶ್ರದ್ಧೆ ಕಣ್ಣಲ್ಲಿ ಆನಂದಾಶ್ರುಗಳನ್ನು ತರಿಸುತ್ತವೆ. ನಾನು ಅದಕ್ಕೆ ತಕ್ಕವನಾಗಿರಲಿ, ಬಿಡಲಿ ನಿನಗೆ ಅದು ಫಲಿಸಿಯೇ ತೀರುತ್ತದೆ. ನೀನು ಮಹಾನ್ ಸೇವೆಯ ನಿಮಿತ್ತನಾಗುವೆ. ಭಗವಂತ ನಿನ್ನನ್ನು ದೀರ್ಘಾಯುವನ್ನಾಗಿ ಮಾಡಲಿ. ಭಾರತದ ಉನ್ನತಿಗಾಗಿ ನಿನ್ನ ಉಪಯೋಗವಾಗಲಿ!"

ಇಂಥ ಶ್ರೇಷ್ಠ ಸತ್ಯಾಗ್ರಹಿಯನ್ನು ಭಾರತೀಯರು ಮರೆತುದಾದರೆ ಅದಕ್ಕಿಂತ ದೊಡ್ಡ ದುರಂತ ಬೇರೊಂದಿಲ್ಲ. ★

'ನೀರಾ' ಒಂದು ಪರಿಪೂರ್ಣ ಪೇಯ :
ರೈತರ ಆಂದೋಲನ ಸ್ವಾಗತಾರ್ಹ

– ಸ್ವಾಮಿ ಭಕ್ತಿತೀರ್ಥ

ನೀರಾ ಹೆಂಡ ಅಲ್ಲವೇ ಅಲ್ಲ. ಹಾಲನ್ನು ಹೆಪ್ಪು ಹಚ್ಚಿದಾಗ ಮಾತ್ರ ಮೊಸರಾಗಲು ಸಾಧ್ಯ. ಹಾಲನ್ನು ಹಾಗೆಯೇ ಬಿಟ್ಟರೆ ಬ್ಯಾಕ್ಟೀರಿಯಾದಿಂದ ಕೂಡಿ ಹಾಳಾಗುತ್ತದೆಯೇ ವಿನಹ ಅದು ಮೊಸರು ಆಗಲಾರದು. ಹಾಗೆಯೇ ನೀರಾವನ್ನು ಹಾಗೇ ಬಿಟ್ಟರೆ ಹಾಳಾಗುತ್ತದೆಯೇ ವಿನಹ ಹೆಂಡವಾಗಲಾರದು.

ತೆಂಗು ಎಲ್ಲರಿಗೂ ಪರಿಚಯವಿರುವ ಕಲ್ಪವೃಕ್ಷ. ಎಳೆನೀರು, ಕಾಯಿ, ಕೊಬ್ಬರಿ ಮನುಷ್ಯನ ಆರೋಗ್ಯಕ್ಕೆ ಎಷ್ಟು ಉತ್ತಮವೋ ಅದಕ್ಕಿಂತ ಹೆಚ್ಚಿನ ಪ್ರಯೋಜನವನ್ನು ನೀರಾದಿಂದ ಮನುಕುಲ ಪಡೆಯಬಹುದಾಗಿದೆ. ಏಕೆಂದರೆ ನೀರಾದಿಂದಲೇ ತೆಂಗಿನ ಸಿಪ್ಪೆ, ನಾರಿನಾಂಶ, ಗಟ್ಟಿಯಾದ ಚಿಪ್ಪಿನಾಂಶ ಉತ್ಪತ್ತಿಯಾಗುವುದರಿಂದ ನೀರ ಇದರ ಸಾರಾಂಶ ವ್ಯರ್ಥವಾಗದೇ ಶರೀರ ಪೋಷಕವಾಗುತ್ತದೆಯಾದ್ದರಿಂದ, ಜೊತೆಗೆ ಇದರ ಬೇರುಗಳು ಆಳವಾಗಿ ಭೂಮಿಯಲ್ಲಿ ವ್ಯಾಪಿಸುವುದರಿಂದ ಹೆಚ್ಚಿನ ಜೀವಸತ್ವ, ಖನಿಜ ಸತ್ವಾದಿಗಳು ಮಾನವ ದೇಹಕ್ಕೆ ದೊರಕುತ್ತವೆ.

ಸುಕ್ರೋಸ್‌ಗಿಂತ ಗ್ಲೂಕೋಸ್ ಅಂಶವೇ ಇದರಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಯಾವುದೇ ಕಾಯಿಲೆಯ ಮನುಷ್ಯ ಇದನ್ನು ನಿತ್ಯ ಸೇವಿಸುವುದರಿಂದ ಆತ ನಿರೋಗಿಯಾಗಬಲ್ಲ.

ಮಾನವ ದೇಹವನ್ನು ಕಾಡುವ ಅತಿಯುಷ್ಣವಷ್ಟೇ ಏಕೆ ವಾತ, ಪಿತ್ತ, ಕಫಗಳನ್ನು ಸಮಪ್ರಮಾಣದಲ್ಲಿರುವಂತೆ ಕಾಯುವ ಹಾಗೂ ರಕ್ತದ ಯಾವುದೇ ದೋಷವನ್ನು ಹೋಗಲಾಡಿಸಿ ತನ್ಮೂಲಕ ಚರ್ಮವ್ಯಾಧಿಗಳನ್ನು ನಿರ್ಮೂಲಗೊಳಿಸುವ ಶ್ರೇಷ್ಠ ಶಕ್ತಿಯನ್ನು ಹೊಂದಿರುವ ಈ ಪಾನೀಯ ಮಾನವ ಶರೀರಕ್ಕೆ ಅಮೃತದಂತಿದೆ.

ತೆಂಗಿನ ಮರಗಳಿಗೆ ನುಸಿರೋಗ ತಗಲಿರುವುದರಿಂದ ರೈತ ಸಮುದಾಯ ಪರ್ಯಾಯವಾಗಿ ನೀರಾ ಇಳಿಸುವ ಪುರಾತನ ಮಾರ್ಗವನ್ನು ಅನುಸರಿಸಲು ಯೋಚಿಸಿ ಇಂದು ಹೋರಾಟ ಮಾಡುತ್ತಿರುವುದು ಕೇವಲ ಸ್ವಾಗತಾರ್ಹವಲ್ಲ, ಸ್ತುತ್ಯಾರ್ಹವಾಗಿದೆ. ನಮ್ಮ ಸುತ್ತಲಿನ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳಗಳಲ್ಲಿ ನೀರಾ ಮತ್ತು ಪನೆಬೆಲ್ಲ ಉದ್ದಿಮೆ

ವಿಶಿಷ್ಟಸ್ಥಾನ ಪಡೆದಿದ್ದು ಅದಕ್ಕೆ ಅಲ್ಲಿಯ ಸರ್ಕಾರಗಳು ಉತ್ತೇಜನ ನೀಡಿವೆ.

ದುರ್ದೈವದ ಸಂಗತಿಯೆಂದರೆ ಕರ್ನಾಟಕದಲ್ಲಿ ಸರ್ಕಾರ ಇದಕ್ಕೆ ರೈತರು ಸ್ವಯಂ ಸುಂಕವನ್ನು ಭರಿಸಿಕೊಡುತ್ತೇವೆಂದರೂ ವ್ಯತಿರಿಕ್ತವಾದ ಹೇಳಿಕೆ ನೀಡುತ್ತಿರುವುದು ಹಾಸ್ಯಾಸ್ಪದವಾಗಿದೆ. ದಿನಸಿ ಅಂಗಡಿಗಳಲ್ಲಿ ಬೀರ್ ಪೇಯವನ್ನು ಮಾರಾಟ ಮಾಡಲು ಅಪ್ಪಣೆ ಕೊಡಲು ಮುಂದಾಗಿದ್ದ ಸರ್ಕಾರ ನೀರಾದ ಬಗ್ಗೆ ತಾಳುವ ಧೋರಣೆ ನಾಚಿಕೆಗೇಡಿನ ಮಾತಾಗಿದೆ. ೧೯೬೮-೬೯ ರವರೆಗೆ ಖಾದಿ-ಗ್ರಾಮೋದ್ಯೋಗ ಮಂಡಲಿಯಲ್ಲಿ ನೀರಾ, ಪನೆಬೆಲ್ಲ ಉದ್ದಿಮೆ ಒಂದು ಉದ್ದಿಮೆಯಾಗಿ ಮೈತಾಳಿ ನಿಂತಿತ್ತು. ಅಂದಿನ ಕಾಂಗ್ರೆಸ್ ಸರ್ಕಾರದ ಅಬ್ಕಾರಿ ಹಾಗೂ ಆರ್ಥಿಕ ಸಚಿವರು ಅಬ್ಕಾರಿ ಲಾಬಿಗೆ ಮಣಿದು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಸಹಕರಿಸುತ್ತಿದ್ದ ಈ ಉದ್ದಿಮೆಯನ್ನು ಮುಚ್ಚಿ ಹಾಕಿದರು. ಆದರೆ ಈ ಉದ್ದಿಮೆಯನ್ನು ಸುತ್ತಲಿನ ರಾಜ್ಯಗಳು ಉಳಿಸಿಕೊಂಡು ಬಂದಿವೆ.

ರೂವಾರಿ ಗಜಾನನ್ ನಾಯಕ್‌ರು :

ಮಹಾತ್ಮ ಗಾಂಧೀಜಿಯವರಿಗೂ ನೀರಾದ ಬಗ್ಗೆ ಕಲ್ಪನೆ ಇರಲಿಲ್ಲ. ಪನೆ ಮರಗಳೆಂದು ಕರೆಯಲ್ಪಡುವ ತೆಂಗು, ತಾಳೆ, ಬಗನಿ ಮತ್ತು ಈಚಲ ಈ ಮರಗಳಿಂದ ಇಳಿಸುವ ರಸ ಸೇಂದಿಯೆಂದು ತಿಳಿದು ಬಡಜನರ ಬದುಕನ್ನು ಇದು ಆಹುತಿ ತೆಗೆದುಕೊಳ್ಳುತ್ತದೆ ಎಂಬ ದೃಷ್ಟಿಯಿಂದ ಗಾಂಧೀಜಿ ಈಚಲ ಮರಗಳನ್ನು ಕಡಿದೊಗೆಯುವಂತೆ ತಮ್ಮ ಅನುಯಾಯಿಗಳಿಗೆ ಕರೆ ಇತ್ತಾಗ ದೇಶದಾದ್ಯಂತ ಸಹಸ್ರ-ಸಹಸ್ರ ಜನ ಈಚಲಮರಗಳನ್ನು ಸೇಂದಿ ಮರವೆಂದೇ ಭಾವಿಸಿ ನೆಲಕ್ಕುರುಳಿಸುತ್ತಿದ್ದಾಗ ಇದರ ಕುರಿತು ಅಗಾಧ ಜ್ಞಾನವಿದ್ದ ಮಹಾರಾಷ್ಟ್ರದ ಶ್ರೀ ಗಜಾನನ ನಾಯಕ್‌ಜೀಯವರು ಗಾಂಧೀಜಿಯವರ ಬಳಿಗೆ ಧಾವಿಸಿ ಅವರ ತಪ್ಪು ಕಲ್ಪನೆಯನ್ನು ಹೋಗಲಾಡಿಸಿ ಮರವನ್ನು ಕತ್ತಿದಾಕ್ಷಣ ಬರುವ ರಸ ನೀರಾಗಿ ಸಿಹಿಯಾಗಿರುವುದರಿಂದ ಅದಕ್ಕೆ ನೀರಾ ಎಂದು ನಾಮಕರಣ ಮಾಡಿ ಅದರಿಂದ ಬೆಲ್ಲ ಹಾಗೂ ಇತರ ಉಪ ಉತ್ಪನ್ನಗಳನ್ನು ತಯಾರಿಸಬಹುದೆಂಬುದರ ಕಲ್ಪನೆಯನ್ನು ನೀಡಿ ಸ್ವಾತಂತ್ರ್ಯ ನಂತರ ಅದಕ್ಕೆ ಭಾರತದಲ್ಲಿ ಒಂದು ಉದ್ದಿಮೆಯ ಸ್ಥಾನವನ್ನು ಕಲ್ಪಿಸಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿ ಜಾರಿಗೆ ತಂದ ರೂವಾರಿ ಶ್ರೀ ಗಜಾನನ ನಾಯಕ್‌ಜೀ.

ಈಗ ಆಗಬೇಕಾದ್ದೇನು ?

ಜನತೆಯ, ಸಮಾಜದ ಸ್ವಾಸ್ಥ್ಯವನ್ನೇ ಹಾಳು ಮಾಡುತ್ತಿರುವ ಸಾರಾಯಿಯನ್ನು ಸರ್ಕಾರ ಅಧಿಕೃತವಾಗಿ ಮಾರಾಟ ಮಾಡುತ್ತಿದ್ದು ಇಂದು ನೀರಾದ

ಬಗ್ಗೆ ತಳೆದಿರುವ ಧೋರಣೆ ಕೇವಲ ನಾಚಿಕೆಗೇಡಿನ ಮಾತಲ್ಲ, ಅಕ್ಷಮ್ಯ ಅಪರಾಧ. ತೆಂಗಿನ ಮರಗಳಿಗೆ ನುಸಿ ರೋಗ ತಗುಲಿ ರೈತರು ಕಂಗಾಲಾಗಿರುವ ಸ್ಥಿತಿಯಲ್ಲಿ ನಷ್ಟವನ್ನು ಭರಿಸಿಕೊಡಲು ಮರವೊಂದಕ್ಕೆ ಇಂತಿಷ್ಟು ಹಣವೆಂದು ನೀಡಿ ಸಹಾಯ ಮಾಡಬೇಕೆಂದು ಸರ್ಕಾರದ ಮುಂದೆ ಕೈಚಾಚಲು ಅಭಿಮಾನ ಅಡ್ಡಿ ಬಂದು ನಾವು ನೀರಾ ಇಳಿಸುತ್ತೇವೆ, ಸಹಕರಿಸಿರಿ ಎಂದು ಹೇಳುವ ದೊಡ್ಡ ಹೃದಯದ ರೈತರನ್ನು ಅಬ್ಕಾರಿ ಹಾಗೂ ಪೋಲಿಸ್ ಇಲಾಖೆಗಳ ಮೂಲಕ ಕಾರಾಗೃಹಕಟ್ಟುವುದು ಅಸಮಂಜಸ, ಅರ್ಥಹೀನ. ಈ ಕಾರ್ಯ ಮೊದಲು ನಿಲ್ಲಲಿ. ಸರ್ಕಾರ ಈ ಕುರಿತು ತಕ್ಷಣ ರೈತ ಮುಖಂಡರು ಹಾಗೂ ಈ ಉದ್ದಿಮೆಯ ಬಗ್ಗೆ ಅನುಭವ ಜ್ಞಾನವಿರುವ ಜನರನ್ನು ಕರೆಸಿ ಮಾತನಾಡಿ ಈ ಉದ್ದಿಮೆಗೆ ಕರ್ನಾಟಕದಲ್ಲಿ ಮತ್ತೆ ಸ್ಥಾನ ನೀಡಲಿ. ಈ ಉದ್ದಿಮೆಯ ಬಗ್ಗೆ ಈ ಕೆಳಕಂಡ ಅಂಶಗಳನ್ನು ಜಾರಿಗೆ ತರುವುದು ಸೂಕ್ತವಾಗಿದೆ.

೧) ಕರ ಆಕರಣೆ :

ಮೊದಲು ಒಂದು ವರ್ಷಕ್ಕೆ ಒಂದು ಮರಕ್ಕೆ ನೀರಾ ಇಳಿಸುವುದಕ್ಕಾಗಿ ಸರ್ಕಾರ ೦.೨೫ ಪೈಸೆ ಕರ ನಿರ್ಧರಿಸಿತ್ತು. ಇಂದು ಸರ್ಕಾರ ಒಂದು ಮರಕ್ಕೆ ಒಂದು ವರ್ಷಕ್ಕೆ ೯೧.೨೫ ರೂ. ನಿರ್ಧರಿಸಲಿ, ಕರವಸೂಲಿ ಮಾಡಿ ಅವರ ತೋಟಗಳಲ್ಲಿರುವಷ್ಟು ಮರಗಳಿಗೆ ನೀರಾ ಇಳಿಸಲು ಅಧಿಕೃತ ಅಪ್ಪಣೆ ನೀಡಲಿ ಅಂದರೆ ಅಬ್ಕಾರಿ ಹಾಗೂ ಪೋಲೀಸ್ ಇಲಾಖಾ ಕಿರುಕುಳದಿಂದ ರೈತ ಮುಕ್ತನಾಗುತ್ತಾನೆ. ಸರ್ಕಾರದ ಆದಾಯ ಹೆಚ್ಚುತ್ತದೆ.

೨) ಉದ್ದಿಮೆಯ ಮುಂದಿನ ಸ್ವರೂಪಗಳು:

ಸೂರ್ಯೋದಯದ ಕಾಲಕ್ಕೆ ನೀರಾವನ್ನು ಪಾನ ಮಾಡಬಹುದು. ಹೆಚ್ಚಾದ ನೀರಾವನ್ನು ಬೆಲ್ಲ, ಕಲ್ಲು ಸಕ್ಕರೆ,ಸಕ್ಕರೆ ಮಾಡಬಹುದು. ಸಕ್ಕರೆಯಿಂದ ಚಾಕೋಲೇಟ್, ಪೆಪ್ಪರ್‌ಮಿಂಟ್, ಬಿಸ್ಕೆಟ್‌ಗಳು, ಜಾಂ, ಜೆಲ್ಲಿ, ಜೂಸ್‌ಗಳು ಹಾಗೂ ಯಾವುದೇ ಮಿಠಾಯಿಗಳನ್ನು ತಯಾರಿಸಬಹುದಾಗಿದೆ. ಕಬ್ಬಿನಿಂದಾದ ಸಕ್ಕರೆ ವಾತವಿಕಾರಿ, ತನ್ಮೂಲಕ ಉಷ್ಣತೆ ಹಾಗೂ ಮಧುಮೇಹಾದಿ ರೋಗಗಳಿಗೆ ಶರೀರವನ್ನು ಈಡು ಮಾಡುತ್ತದೆ. ಆದರೆ ನೀರಾದಿಂದ ಉತ್ಪತ್ತಿಯಾದ ಯಾವುದೇ ವಸ್ತುವನ್ನು ಹೇರಳವಾಗಿ ಬಳಸಿದರೂ ದುಷ್ಪರಿಣಾಮವಾಗದು. ಜೀವಸತ್ವ, ಖನಿಜ ಸತ್ವಗಳಿಂದ ಕೂಡಿರುವ ಈ ವಸ್ತುಗಳಿಂದ ಶರೀರ ಎಂದೂ ತನ್ನ ಚೈತನ್ಯವನ್ನು ಕಳೆದುಕೊಳ್ಳಲಾರದು.

೨೯ ನೇ ಪುಟ ನೋಡಿ

ಜನಪದ ಕಾಳು ಬ್ಯಾಂಕ್‌ಗಳು

-ಎಂ. ಎಸ್. ಸ್ವಾಮಿನಾಥನ್
ಕೃಷಿ ಅರ್ಥ ಶಾಸ್ತ್ರಜ್ಞ

ಕಳೆದ ಏಪ್ರಿಲ್ ೨೪ ರಂದು ಪ್ರಧಾನ ಮಂತ್ರಿ ಅಟಲ ಬಿಹಾರಿ ವಾಜಪೇಯಿ "ಗ್ರಾಮೀಣ ಭಾರತದ ಆಹಾರ ಅಭದ್ರತೆಯ ನಕಾಶೆ" ಎಂಬ ವರದಿಯನ್ನು ಬಿಡುಗಡೆ ಮಾಡಿದರು. ಈ ವರದಿಯನ್ನು ಸಂಸತ್ ಮತ್ತು ವಿಶ್ವರಾಷ್ಟ್ರ ಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮ ಇವೆರಡೂ ಸೇರಿ ತಯಾರಿಸಿವೆ. ಆಗಸ್ಟ್ ೧೫, ೨೦೦೭ ರ ವೇಳೆಗೆ ಅಂದರೆ ಸ್ವಾತಂತ್ರ್ಯದ ೬೦ ನೇ ವಾರ್ಷಿಕೋತ್ಸವದ ವೇಳೆಗೆ ಭಾರತದ ಜನತೆ ಹಸಿವಿನಿಂದ ಬಹಳಷ್ಟು ಮುಕ್ತಿ ಹೊಂದಿರಬೇಕಾದ ಅಗತ್ಯವನ್ನು ಕುರಿತು ವಾಜಪೇಯಿ ಒತ್ತುಕೊಟ್ಟು ಹೇಳಿದ್ದಾರೆ. ೨೦೦೭ ನೇ ಇಸ್ವಿ ಹತ್ತನೇ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷವೂ ಆಗಿದೆ. 'ಹಸಿವು ರಹಿತ ಭಾರತ' ಈ ಗುರಿಯನ್ನು ತಲುಪುವುದಕ್ಕಾಗಿ ಪ್ರಧಾನಿಯವರು ಬಹುಮುಖಿ ಯುದ್ಧತಂತ್ರವನ್ನು ಪ್ರತಿಪಾದಿಸಿದ್ದಾರೆ. ಅವುಗಳಲ್ಲಿ ಇದ್ದುಳ್ಳವರು ಹಸಿದವರಿಗೆ ಸಾಮೂಹಿಕ ಭೋಜನ ಏರ್ಪಡಿಸುವ ಪ್ರಾಚೀನ ಪರಂಪರೆಯನ್ನು ಪುನಶ್ಚೇತನಗೊಳಿಸುವುದೂ ಒಂದು.

ಮೇಲ್ಕಾಣಿಸಿದ ವರದಿಯಲ್ಲಿ ಐದು ಮುಖ್ಯ ಸಂಗತಿಗಳನ್ನು ಗುರುತಿಸಲಾಗಿದೆ. ಈ ಐದು ಸಂಗತಿಗಳು ದೇಶದ ಪ್ರತಿಯೊಂದು ರಾಜ್ಯದಲ್ಲೂ ಇವೆ ಮತ್ತು ಅವು ಆಯಾ ರಾಜ್ಯದ ಬಲವೂ ಆಗಿವೆ, ದೌರ್ಬಲ್ಯವೂ ಆಗಿವೆ. ಅವು ಯಾವುವೆಂದರೆ:

೧. ಉತ್ಪಾದಿತವಾದ ಆಹಾರದ ಲಭ್ಯತೆ;

೨. ಕೊಳ್ಳುವಶಕ್ತಿ ಆಧಾರಿತವಾದ ಆಹಾರದ ಲಭ್ಯತೆ;

೩. ಶುದ್ಧ ಕುಡಿಯುವ ನೀರು ಮತ್ತು ಆರೋಗ್ಯಪೂರ್ಣವಾದ ಪರಿಸರ, ಆರೋಗ್ಯ ರಕ್ಷಣೆ, ಪ್ರಾಥಮಿಕ ಶಿಕ್ಷಣ ಇವುಗಳನ್ನಾಧರಿಸಿದ ಶಾರೀರಿಕ ಆರೋಗ್ಯ, ಪ್ರಾಕೃತಿಕ ಹಾಗೂ ಮಾನವ ನಿರ್ಮಿತ ದುರಂತ ಮತ್ತು ಅನಾಹುತಗಳಾಧಾರಿತ ತಾತ್ಕಾಲಿಕ ಹಸಿವು;

೪. ಉತ್ಪಾದನಾ ಕ್ರಿಯೆ ಸಾಂಗೋಪಾಂಗವಾಗಿ ನಡೆಯಲು ಅಗತ್ಯವಾದ ಪ್ರಕೃತಿ ಸಮತೋಲನದ ಮೇಲ್ವಿಚಾರಣೆ.

ಮಾರುಕಟ್ಟೆಯಲ್ಲಿ ಆಹಾರಧಾನ್ಯ ದೊರೆಯಬೇಕಾದ ಸಂಗತಿ

ಮತ್ತು ಶುದ್ಧ ಕುಡಿಯುವ ನೀರು ಸಿಗಬೇಕಾದ ಸಂಗತಿ ಎಷ್ಟು ಮಹತ್ವದ್ದೋ ಅಷ್ಟೇ ಮಹತ್ವದ್ದು ಪ್ರತಿಯೊಬ್ಬ ವ್ಯಕ್ತಿಗೂ ಜೀವನ ನಿರ್ವಹಣೆ ಮತ್ತು ಆದಾಯ ಸಂಪಾದಿಸಿಕೊಡುವ ಅವಕಾಶಗಳು, ಆರೋಗ್ಯ ರಕ್ಷಣಾ ಸೌಕರ್ಯಗಳು, ಶಿಕ್ಷಣ, ನೈರ್ಮಲ್ಯ ವ್ಯವಸ್ಥೆ, ಪರಿಸರ ಆರೋಗ್ಯ ದೊರೆಯಬೇಕಾದದ್ದೂ ಸಹ ಮಹತ್ವದ ಸಂಗತಿ ಎಂದು ಆ ವರದಿಯು ಬಹಿರಂಗಪಡಿಸುತ್ತದೆ.

ಆ ವರದಿ ಮತ್ತು ನಕಾಶೆಯ ಪ್ರಕಾರ ಆಹಾರದ ಲಭ್ಯತೆ ಮತ್ತು ಅದರ ನಿರಾಶಂಕ ಮುಂದುವರಿಯುವಿಕೆ ಇವು ವಿಶೇಷ ಗಮನಕೊಡಬೇಕಾದ ವಿಷಯಗಳಾಗಿವೆ. ಉದಾಹರಣೆಗೆ ಆಹಾರ ಲಭ್ಯತೆಯ ಕಾರಣವಾಗಿ ದೊರೆಯುವ ಸುರಕ್ಷತೆಯ ದೃಷ್ಟಿಯಿಂದ ಪಂಜಾಬ್ ಮತ್ತು ಹರಿಯಾಣಾ ರಾಜ್ಯಗಳು ಉನ್ನತ ಸ್ಥಾನದಲ್ಲಿವೆ. ಆದರೆ ಅರಣ್ಯ ವಿಸ್ತಾರ, ಅಂತರ್‌ಜಲದ ಉಪಯೋಗ, ಮಣ್ಣಿನ ಕೀಳು ಗುಣಮಟ್ಟ, ಪರ್ಯಾಯ ಬೆಳೆಯ ಮೂಲಕ ನೈಟ್ರೋಜನ್ ಸೇರಿಸುವ ಲೆಗುಮನಿ ತಳಿಗಳು ಇಂಥ ವಿಷಯಗಳಲ್ಲಿ ಆ ಎರಡು ರಾಜ್ಯಗಳು ತೀರ ಹಿಂದುಳಿದಿವೆ.

ಇನ್ನು ಭಾರತದ ಬಹುತೇಕ ಭಾಗಗಳಲ್ಲಿ ಆಹಾರ ಖರೀದಿಗಾಗಿ ಇರುವ ಆರ್ಥಿಕ ದೌರ್ಬಲ್ಯವೇ ಆಹಾರದ ಭದ್ರತೆಯನ್ನು ಒದಗಿಸಲು ವಿಘ್ನವಾಗಿದೆ.

ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳು ಆಹಾರದ ಲಭ್ಯತೆಯ ದೃಷ್ಟಿಯಿಂದ ಸುಭದ್ರವಾಗಿವೆ. ಆದರೆ ಆಹಾರದ ಉಪಭೋಗ ಮತ್ತು ಉಪಯೋಗದ ದೃಷ್ಟಿಯಿಂದ ಅವು ಸುರಕ್ಷಿತವಾಗಿಲ್ಲ. ಈ ರಾಜ್ಯಗಳು ಪರಿಸರ ಆರೋಗ್ಯ ಮತ್ತು ಶುದ್ಧ ಕುಡಿಯುವ ನೀರಿನ ಕಡೆಗೆ ಹೆಚ್ಚು ಗಮನ ಕೊಡಬೇಕಾಗಿದೆ.

ಇನ್ನು ತಮಿಳುನಾಡು. ಈ ರಾಜ್ಯವು ಆಹಾರ ಲಭ್ಯತೆ ಮತ್ತು ಉಪಭೋಗದ ವಿಷಯಗಳಲ್ಲಿ ಒಳ್ಳೆಯ ಸ್ಥಿತಿಯಲ್ಲಿದೆ. ಆದರೆ ಪ್ರತ್ಯಕ್ಷವಾಗಿ ಆಹಾರ ದೊರೆಯುವಿಕೆಯ ವಿಷಯದಲ್ಲಿ ಹಿಂದಿದೆ. ಇದಕ್ಕೆ ಕಾರಣ ಗ್ರಾಮಗಳಲ್ಲಿ ಇರುವ ದೊಡ್ಡ ಸಂಖ್ಯೆಯ ಭೂಹೀನ ಕೃಷಿ ಕಾರ್ಮಿಕರು. ಆದ್ದರಿಂದ ಬಡವರಿಗೆ ತಿಳುವಳಿಕೆ, ಕುಶಲತೆಗಳನ್ನು ಒದಗಿಸುವುದರ ಜೊತೆಗೆ ಅವರಿಗೆ ಭೌತಿಕ ಸೌಲಭ್ಯಗಳನ್ನು ಅಲ್ಲಿ ಒದಗಿಸಿಕೊಡಬೇಕಾಗಿದೆ. ಕುಶಲತೆಯಿಲ್ಲದ ಕೆಲಸದಿಂದ ಕುಶಲತೆ ಇರುವ ಕೆಲಸಕ್ಕೆ ಅವರನ್ನು ವರ್ಗಾಯಿಸುವುದರ ಮೂಲಕ, ಕೃಷಿಯೇತರ ಉದ್ಯೋಗಗಳಿಗೆ ವರ್ಗಾಯಿಸುವುದರ ಮೂಲಕ ಬಡತನ ಆಧಾರಿತ ಹಸಿವನ್ನು ಕಡಿಮೆ ಮಾಡಬಹುದಾಗಿದೆ.

ಗುಜರಾತ್ ರಾಜ್ಯವು ನೀರಿನ ಉಳಿತಾಯ, ಸದುಪಯೋಗ ಮತ್ತು

ಸಮಾನ ಉಪಯೋಗ ಇತ್ಯಾದಿಗಳ ಬಗ್ಗೆ ಗಮನ ಕೊಡಬೇಕಾಗಿದೆ. ಹವಾಮಾನ ಮತ್ತು ಪ್ರಾಕೃತಿಕ ವಿಕೋಪಗಳ ನಿರ್ವಹಣೆ ಇವೂ ಅಲ್ಲಿ ವಿಶೇಷ ಮಹತ್ವದ ವಿಷಯಗಳಾಗಿವೆ.

ಆ ವರದಿ ಮತ್ತು ನಕಾಶೆ ಒಂದು ಮುಖ್ಯ ಪಾಠವನ್ನು ಮನದಟ್ಟು ಮಾಡಿಕೊಟ್ಟಿದೆ. ಅದೇನೆಂದರೆ ಈಗ ಇರುವ 'ವಿಶ್ವವ್ಯಾಪಿ ಚಿಂತನೆ, ಸ್ಥಳೀಯ ಕ್ರಿಯಾ ಯೋಜನೆ" ಎಂಬ ಘೋಷಣೆಯನ್ನು "ಸ್ಥಳೀಯವಾಗಿಯೇ ಚಿಂತನೆ, ಯೋಜನೆ, ಕ್ರಿಯೆ; ಇದಕ್ಕೆ ರಾಷ್ಟ್ರೀಯ ಹಾಗೂ ಜಾಗತಿಕ ಬೆಂಬಲ" ಎಂಬುದಾಗಿ ಬದಲಾಯಿಸಬೇಕಾಗಿದೆ. ಸುದೈವದಿಂದ ಈಗ ಚುನಾಯಿತವಾಗಿರುವ ಸ್ಥಳೀಯ ಸಂಸ್ಥೆ ಮತ್ತು ಸಹ ಭಾಗಿತ್ವದ ಪ್ರಜಾತಂತ್ರ ವ್ಯವಸ್ಥೆಯಾದ ಗ್ರಾಮಸಭೆ ಇವುಗಳಲ್ಲಿ ಸಮನ್ವಯ ಸಾಧಿಸುವುದು ಸಾಧ್ಯವಾಗಿದೆ.

ಆ ನಕಾಶೆಯನ್ನು ಉಪಯೋಗಿಸಿಕೊಂಡು ಈಗ ರಾಜ್ಯ ಸರ್ಕಾರಗಳು ಆಯಾ ಪ್ರದೇಶಗಳಲ್ಲಿರುವ ಅನುಕೂಲ ಮತ್ತು ಅನಾನುಕೂಲಗಳನ್ನು ಆಧರಿಸಿ, ಆಗಾಗ್ಗೆ ವಲಸೆಗಳ ಕಾರಣದಿಂದ ಉಂಟಾಗುವ ಹಸಿವಿನ ಸಮಸ್ಯೆ ಆಧರಿಸಿ, ಗೋಚರ ಮತ್ತು ಅಗೋಚರವಾದ ಅಂದರೆ ಸೂಕ್ಷ್ಮ ಪೌಷ್ಟಿಕಾಂಶಗಳ ಕೊರತೆಯಿಂದ ಆಗುವ ಹಸಿವಿನ ಸಮಸ್ಯೆ ಆಧರಿಸಿ ಒಂದು ಲಾಭ–ನಷ್ಟದ ತಃಖ್ತೆಯನ್ನು ತಯಾರಿಸಬಹುದು.

೨೦೦೧ ನೇ ಸೆನಸಸ್ ಪ್ರಕಾರ ನಮ್ಮ ಜನಸಂಖ್ಯೆಯು ನಿರೀಕ್ಷಣೆಗಿಂತ ೨೦ ದಶಲಕ್ಷದಷ್ಟು ಹೆಚ್ಚಾಗಿದೆ ಮತ್ತು ಲಿಂಗ ಅನುಪಾತವು ೧೦೦೦ ಪುರುಷರಿಗೆ ೯೩೩ ಮಹಿಳೆಯರ ಪ್ರಕಾರ ಇದೆ. ಆರು ವರ್ಷದ ಒಳಗಿನ ಲಿಂಗ ಅನುಪಾತವು ಇನ್ನೂ ಹೆಚ್ಚು ಅಸಮತೋಲನವಾಗಿದೆ. ಹೆಣ್ಣು ಭ್ರೂಣಗಳ ಹತ್ಯೆ ಹೆಚ್ಚಾಗುತ್ತಿರುವಂತೆ ತೋರುತ್ತಿದೆ. ಎಲ್ಲರೂ ಅಕ್ಷರಸ್ಥರಾಗಬೇಕು ಮತ್ತು ಎಲ್ಲರೂ ಆರೋಗ್ಯವಂತರಾಗಬೇಕು ಎಂಬ ಗುರಿಯ ಜೊತೆಗೆ ಲಿಂಗನ್ಯಾಯ ಮತ್ತು ಸಮಾನತೆಯನ್ನು ಸಾಧಿಸುವ ಪ್ರಯತ್ನದಲ್ಲಿರುವಾಗಲೇ ನಾವು ಸರ್ಕಾರದ ಉಗ್ರಾಣಗಳಲ್ಲಿ ಹೆಚ್ಚು ಹೆಚ್ಚಾಗಿ ಸಂಗ್ರಹವಾಗುತ್ತಿರುವ ಆಹಾರಧಾನ್ಯಗಳ ಪ್ರಯೋಜನ ಪಡೆಯುವಂತಾಗಲೂಬೇಕು. ಆಗ 'ಹಸಿವು ರಹಿತ ಭಾರತ'ದ ಗಾಂಧೀಜಿಯವರ ಕಲ್ಪನೆಯನ್ನು ಸಾಕಾರಗೊಳಿಸಬಹುದು.

ಈಗ ಸರ್ಕಾರದಲ್ಲಿಯ ಆಹಾರಧಾನ್ಯದ ಸಂಗ್ರಹ: ಗೋಧಿ, ಅಕ್ಕಿ ಮತ್ತು ಇತರ ಧಾನ್ಯಗಳದು : ೪೫ ದಶಲಕ್ಷ ಟನ್‌ಗಳಿಗೂ ಹೆಚ್ಚಾಗಿದೆ.

ಮುಂದಿನ ಕೆಲವು ತಿಂಗಳಲ್ಲಿ ಸರ್ಕಾರವು ೧೫ ರಿಂದ ೨೦ ದಶಲಕ್ಷ ಟನ್

ಗೋಧಿ ಮತ್ತು ಅಕ್ಕಿಯನ್ನು ಖರೀದಿಸಬೇಕಾಗಬಹುದು. ಈ ಧಾನ್ಯ ಸಂಗ್ರಹದ ಬಹುಭಾಗ ಗೋಣಿಚೀಲಗಳಲ್ಲಿ ಮತ್ತು ತಾತ್ಕಾಲಿಕವಾಗಿ ಕಟ್ಟಲಾಗಿರುವ ಉಗ್ರಾಣಗಳಲ್ಲಿರುತ್ತದೆ. ಕೇಂದ್ರ ಸರ್ಕಾರವು ಅನೇಕ ಗ್ರಾಮಾಂತರ ಉಗ್ರಾಣಗಳನ್ನು ಕಟ್ಟುವ ಯೋಜನೆಯನ್ನು ಘೋಷಿಸಿದೆ. ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ ಮತ್ತು ಇತರ ರಾಜ್ಯಗಳಲ್ಲಿಯ ಕ್ಷಾಮವು ಬಡತನ ಆಧಾರಿತ ಹಸಿವು ಮತ್ತು ಕುಡಿಯುವ ನೀರಿನ ಅಭಾವವನ್ನು ಹೆಚ್ಚಿಸಲು ಕಾರಣವಾಗಿದೆ.

ಆದ್ದರಿಂದ ಜನಪದ ಕಾಳು ಬ್ಯಾಂಕುಗಳನ್ನು ಸ್ಥಾಪಿಸುವ ದೂರದೃಷ್ಟಿಯ ಯೋಜನೆಯನ್ನು ಪ್ರಾರಂಭಿಸುವ ಕಾಲ ಈಗ ಬಂದಿದೆ. ನಮ್ಮ ದೇಶದಲ್ಲಿ ಸರಾಸರಿ ಒಂದು ಟನ್ ಗೋಧಿ ಅಥವಾ ಅಕ್ಕಿ ಐದು ಜನಕ್ಕೆ ಒಂದು ವರ್ಷಕ್ಕೆ ಬೇಕಾಗುತ್ತದೆ. ಮೊದಲು ಇನ್ನೂರು ಟನ್ ಆಹಾರ ಸಂಗ್ರಹ ಇರುವ ಜನಪದ ಕಾಳು ಬ್ಯಾಂಕುಗಳನ್ನು "ಅತ್ಯಂತ ಹಸಿವಿನ" ಹಳ್ಳಿಗಳಲ್ಲಿ ಸ್ಥಾಪಿಸಬಹುದು. ಬಹಳ ದೂರದ ಹಾಗೂ ಸಂಪರ್ಕ ಸರಿಯಿಲ್ಲದಿರುವಂಥ ಹಳ್ಳಿಗಳಿಗೆ ಈ ವಿಷಯವಾಗಿ ಪ್ರಾಧಾನ್ಯತೆ ಕೊಡಬೇಕು. ಈ ಉದ್ದೇಶ್ಯಕ್ಕಾಗಿ ಕೇಂದ್ರ ಸರ್ಕಾರವು ಕೂಡಲೇ ಐದು ದಶಲಕ್ಷ ಟನ್ ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿದರೆ ಮುಂದಿನ ಕೆಲವೇ ತಿಂಗಳುಗಳಲ್ಲಿ ೨೫.೦೦೦ ಕಾಳು ಬ್ಯಾಂಕುಗಳನ್ನು ಸ್ಥಾಪಿಸಬಹುದು. ಹೀಗೆ ಮಾಡದೇ ಇದ್ದಲ್ಲಿ ಉಗ್ರಾಣಗಳಲ್ಲಿ ಸಂಗ್ರಹವಾಗಿ ಬಿದ್ದಿರುವ ೬೦ ದಶಲಕ್ಷ ಟನ್ ಆಹಾರ ಕೊಳೆತುಹೋಗುವ ಸಂಭವವಿದೆ. ಇದು ಬಹಳ ಶೋಚನೀಯ ಸಂಗತಿಯಾಗುವುದು. ಏಕೆಂದರೆ "ಹಸಿದವರಿಗೆ ಆಹಾರವೇ ದೇವರು".

ಪ್ರಾರಂಭದ ಈ ೨೫೦೦೦ ಹಳ್ಳಿಗಳಲ್ಲಿಯ ಕಾಳು ಬ್ಯಾಂಕುಗಳ ಅನುಭವದ ಆಧಾರದ ಮೇಲೆ ಈ ವರ್ಷದ ಮುಂದಿನ ಅವಧಿಯಲ್ಲಿ ಇನ್ನೂ ೨೫೦೦೦ ಬ್ಯಾಂಕುಗಳನ್ನು ಸ್ಥಾಪಿಸುವುದರ ಮೂಲಕ ಹೆಚ್ಚುವರಿಯಾಗಿರುವ ೧೦ ದಶಲಕ್ಷ ಟನ್ ಆಹಾರವನ್ನು ಸಾಮಾಜಿಕವಾಗಿ ಉಪಯುಕ್ತವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು, ಈ ಹೊಸ ಶತಮಾನದ ಮೊದಲ ವರ್ಷವು ಪ್ರತಿ ವ್ಯಕ್ತಿಗೂ ಸಂಪಾದನೆಯ ಹಾಗೂ ಆರೋಗ್ಯಕರ ಬದುಕನ್ನು ಕೊಡುವಲ್ಲಿ ಒಂದು ದಿಟ್ಟ ಕ್ರಮವನ್ನು ಕೈಗೊಳ್ಳುವಂತಾಗಲಿ.

ಸಾಧ್ಯವಿರುವೆಡೆಯಲ್ಲೆಲ್ಲ ಜನಪದ ಕಾಳು ಬ್ಯಾಂಕುಗಳಿಗೆ ಸ್ಥಾನೀಯವಾಗಿ ದೊರೆಯುವ ಕಾಳುಗಳನ್ನು ಸಂಗ್ರಹಿಸುವ ಮೂಲಕ ಅವುಗಳನ್ನು ಮುಂದುವರಿಸಿಕೊಂಡು ಹೋಗಬಹುದು. ಅದನ್ನು ಗ್ರಾಮಾಂತರ ಉಗ್ರಾಣ ಯೋಜ

ನೆಯು ಜೊತೆ ಜೋಡಿಸಬೇಕು. ಅವು ಗ್ರಾಮಾಂತರ ಛತ್ರಛಾಯೆಯಲ್ಲಿ ನಡೆಯಬೇಕು ಮತ್ತು ಸ್ಥಾನೀಯ ಮಹಿಳೆಯರ ಮತ್ತು ಪುರುಷರ ಸ್ವಸಹಾಯ ಗುಂಪುಗಳು ಅವುಗಳನ್ನು ನಿರ್ವಹಿಸಬೇಕು. ಇದರಿಂದಾಗಿ ಅವು ಸ್ಥಳೀಯ ಪರಿಸ್ಥಿತಿಗೆ ಪ್ರಸ್ತುತವಾಗುವುದರ ಜೊತೆಗೆ ಆಹಾರ ಧಾನ್ಯಗಳ ವಿತರಣೆ ವ್ಯವಸ್ಥೆಯ ಖರ್ಚನ್ನೂ ಕಡಿಮೆ ಮಾಡಬಹುದು. ಜನಪದ ಕಾಳು ಬ್ಯಾಂಕುಗಳನ್ನು ಕೆಳಗೆ ಕಾಣಿಸಿದ ಸ್ಥಾನೀಯ ಕಾರ್ಯಕ್ರಮ ಪ್ರಾರಂಭಿಸಲು ಉಪಯೋಗಿಸಿಕೊಳ್ಳಬಹುದು:–

೧. ಕೆಲಸಕ್ಕಾಗಿ ಆಹಾರ; (Food for work)
೨. ಗರ್ಭಿಣಿಯರು, ಬಾಣಂತಿಯರು, ಶಿಶುಗಳು ಮತ್ತು ವೃದ್ಧರು, ದುರ್ಬಲರು – ಇಂಥವರಿಗೆ ಆಹಾರ ದೊರೆಯುವಂತೆ ಮಾಡುವುದು;
೩. ಖರಾಬು ಜಮೀನಿನ ಅಭಿವೃದ್ಧಿಗಾಗಿ ಹಾಗೂ ನೀರು ಉಳಿತಾಯದ ಯೋಜನೆಗಾಗಿ ಉಪಯೋಗಿಸಿಕೊಳ್ಳುವುದು;
೪. ಸಾಮುದಾಯಿಕ. ಸಂಪನ್ಮೂಲ ಆಸ್ತಿಗಳನ್ನು ಪರಿಸರ ಹಿತದೃಷ್ಟಿಯಿಂದ ಕಾಪಾಡುವುದು;
೫. ಸಾಮೂಹಿಕ ಕೆರೆ–ಕುಂಟೆಗಳನ್ನು ನಿರ್ಮಿಸುವುದು.
೬. ಸಾರ್ವಜನಿಕ ವಿತರಣಾ ವ್ಯವಸ್ಥೆ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅಂತ್ಯೋದಯ ಅನ್ನ ಯೋಜನೆಯನ್ನು ಜಾರಿಗೊಳಿಸಲು ಸಾಧನವನ್ನಾಗಿ ಮಾಡುವುದು.

ಆಹಾರದ ಉಪಭೋಗ ಮತ್ತು ಆಹಾರದ ಸಮಾನ ಹಂಚಿಕೆಯ ವಿಷಯಗಳಿಗೆ ನಾವು ಅತ್ಯಂತ ಹೆಚ್ಚು ಗಮನ ಕೊಡಬೇಕಾಗಿದೆ. ಇತ್ತೀಚಿನ ವರ್ಷಗಳಲ್ಲಿ ವ್ಯವಸಾಯದ ಉತ್ಪಾದನೆಯಲ್ಲಿ, ನೀರಾವರಿಯಲ್ಲಿ, ಸುಗ್ಗಿಯ ನಂತರದ ವ್ಯವಸ್ಥೆಯಲ್ಲಿ ಪ್ರಗತಿ ಬಹಳಷ್ಟು ಕುಂಠಿತವಾಗುತ್ತಿದೆ.

ಅನೇಕ ವ್ಯವಸಾಯೋತ್ಪನ್ನಗಳ ಬೆಲೆ ಬಿದ್ದುಹೋಗಿದೆ. ನಮ್ಮ ರೈತ ಕುಟುಂಬಗಳು ತೀವ್ರತಮವಾದ ಆರ್ಥಿಕ ಸಂಕಟದಲ್ಲಿವೆ; ಮಾನಸಿಕ ಒತ್ತಡವನ್ನು ಅನುಭವಿಸುತ್ತಿವೆ. ಉಲ್ಬಣಗೊಳ್ಳುತ್ತಿರುವ ಈ ಪರಿಸ್ಥಿತಿಯನ್ನು ತಡೆಯದಿದ್ದರೆ ಸಾಮಾಜಿಕ ಕ್ಷೋಭೆ ಉಂಟಾಗುವುದು. ಏಕೆಂದರೆ ವ್ಯವಸಾಯವೆಂದರೆ ಕೇವಲ ಆಹಾರ ಬೆಳೆಯುವ ಯಂತ್ರವಲ್ಲ; ಅದು ದೇಶದ ೭೦ ಕೋಟಿ ಮಕ್ಕಳ ಮಹಿಳೆಯರ ಮತ್ತು ಪುರುಷರ ಜೀವನಾಧಾರವಾಗಿದೆ. ಇಂದಿನ ಸಮಸ್ಯೆ ಮಾರುಕಟ್ಟೆ ಹಾಗೂ ವಿತರಣೆಗೆ ಮಾತ್ರ ಸಂಬಂಧಿಸಿದ್ದಾಗಿದೆ ಎಂದು ತಿಳಿದು ಸುಮ್ಮನೆ ಕುಳಿತುಕೊಳ್ಳಲು ಸಮಯವಿಲ್ಲ. ಅದೇ ಹೊತ್ತಿಗೆ ಆಹಾರ ಸಂಗ್ರಹದ ಬೆಟ್ಟ ಮತ್ತು ಹಸಿದ ಜನಕೋಟಿ ಇವೆರಡು ಒಟ್ಟಿಗೆ ಇರುವಂಥ ಪರಿಸ್ಥಿತಿಯನ್ನು ಮುಂದುವರಿಸಕೂಡದಲ್ಲವೆ? ★ ('ದಿ ಹಿಂದೂ' ಸಾಭಾರ. ಅನು: ಸು.ಕೌ.)

ನ್ಯೂ ಟ ನ್

-ವಿನೋಬಾ

[ಇಡೀ ಆಧ್ಯಾತ್ಮಿಕ ಚಿಂತನದ ಗುರಿ 'ಗುಣಗ್ರಹಣ' ಎಂಬುದಾಗಿ ಭಾವಿಸಿದ್ದ ಸಂತ ವಿನೋಬಾ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು; ಕಾರಾಗೃಹ ವಾಸ ಅನುಭವಿಸಿದ್ದರು; ಆಶ್ರಮಗಳನ್ನು ಸ್ಥಾಪಿಸಿದ್ದರು. ಅವರು ಕೆಲವು ಚಿಂತಕರನ್ನು ರೇಖಾ ಚಿತ್ರಣದಂತೆ ಪರಿಚಯ ಮಾಡಿಕೊಟ್ಟಿದ್ದಾರೆ. ಅಂಥ ಲೇಖನಗಳ ಸರಣಿಯಲ್ಲಿ ಇದು ಹದಿನೈದನೆಯದು. -ಸಂ]

ನ್ಯೂಟನ್ ವಿಜ್ಞಾನಿಯಾಗಿದ್ದ. ಅವನು ಬ್ರಹ್ಮಚಾರಿಯಾಗಿದ್ದ. ಅವನಿಗೆ ಒಂದೇ ಇಚ್ಛೆ ಇತ್ತು – ಗಣಿತದ ಅಧ್ಯಯನ, ವಿಜ್ಞಾನದ ಶೋಧನ. ಅವನು ಇವೆರಡರಲ್ಲಿ ಬಹಳ ತನ್ಮಯನಾಗಿದ್ದ ತನ್ನ ಕೊನೆಯ ದಿನಗಳಲ್ಲಿ ಅವನು ಎಷ್ಟೋ ದಿನ ಮನೆಯಿಂದ ಹೊರಗೆ ಬರಲೇ ಇಲ್ಲ. ಅಹೋರಾತ್ರಿಯ ಪರಿಶ್ರಮದಿಂದ ಅವನು ಕೊನೆಗೆ ಒಂದು ನಿರ್ಣಯಕ್ಕೆ ಬಂದ. ಶೋಧನೆ ಪೂರ್ಣಗೊಂಡಿತು. ಅವನಿಗೆ ಆನಂದವಾಯಿತು. ತನ್ನ ಶೋಧನೆಯನ್ನು ಅವನು ಕಾಗದದ ಚಿಕ್ಕ ಚಿಕ್ಕ ತುಂಡುಗಳ ಮೇಲೆ ಬರೆದಿಟ್ಟು ಹೊರಗೆ ತಿರುಗಾಡಲು ಹೋದ. ಆಳು ಯೋಚನೆ ಮಾಡಿದ: ಕೋಣೆ ಬಹಳ ಗಲೀಜಾಗಿದೆ; ಯಜಮಾನ ಎಂದೂ ಕೋಣೆಯಿಂದ ಹೊರಗೆ ಬರುವುದೇ ಇಲ್ಲ; ಬಹಳ ದಿನಗಳ ತರುವಾಯ ಹೊರಗೆ ಹೋಗಿದ್ದಾನೆ; ಆದ್ದರಿಂದ ಕೋಣೆಯನ್ನು ಸ್ವಲ್ಪ ಸ್ವಚ್ಛ ಮಾಡೋಣ ಎಂದುಕೊಂಡ. ಅವನು ಇಡೀ ಕೋಣೆಯನ್ನು ಸ್ವಚ್ಛ ಮಾಡಿದ. ಆ ಸ್ವಚ್ಛತೆಯಲ್ಲಿ ಆ ಸಂಶೋಧನೆಯ ಕಾಗದಗಳೂ ಹೋದವು. ನ್ಯೂಟನ್ ಹಿಂದಿರುಗಿ ಬಂದ; ನೋಡಿದ; ಕೋಣೆ ಸ್ವಚ್ಛವಾಗಿದೆ; ಸಂಶೋಧನೆಯ ಕಾಗದಗಳು ಮಾತ್ರ ಇಲ್ಲ. ಅವನು ಆಳನ್ನು ಕೇಳಿದರೆ ಆ ಆಳು ಹೇಳಿದ: ಎಲ್ಲ ಕಸವನ್ನೂ ಸುಟ್ಟು ಹಾಕಿದೆ. ಆಗ ನ್ಯೂಟನ್ ಶಾಂತ ಧ್ವನಿಯಲ್ಲಿ ಆಳಿಗೆ ಇಷ್ಟೇ ಹೇಳಿದ : "ಆಯಿತು. ಆದರೆ, ನೋಡು, ಇನ್ನೊಂದು ಸಲ ಕೇಳದೆ ಇಂಥ ಕೆಲಸ ಮಾಡಕೂಡದು. ಆ ಕಾಗದಗಳು ನನಗೆ ಬೇಕಾಗಿದ್ದವು." ಹೀಗೆ ಬಹಳ ಶಾಂತಿಯಿಂದ ಉತ್ತರ ಕೊಟ್ಟ. ಸಂಶೋಧನೆಯಲ್ಲಿ ಇಷ್ಟು ಕಾಲ ತೊಡಗಿಸಿಕೊಂಡು ಅದನ್ನು ಬರೆದ ಕಾಗದಗಳು ಸುಟ್ಟು ಹೋದರೆ ಎಷ್ಟು ಕ್ಷೋಭೆ ಆಗುತ್ತದೆ! ಆದರೆ ನ್ಯೂಟನ್ ಶಾಂತವಾಗಿದ್ದ. ಜೀವನದ ಅಮೂಲ್ಯ ಶೋಧ ಸಾಮಗ್ರಿ ಸುಟ್ಟುಹೋದರೂ ಕಾಮ–ಕ್ರೋಧದ ಹೆಸರೂ ಸಹ ಇಲ್ಲ. ನ್ಯೂಟನ್ ಯೋಚಿಸಿದ: ನಾನು ಗಣಿತದ ಸೇವಕ, ನೌಕರ

ನನ್ನ ಸೇವಕ. ಅವನು ನನ್ನ ಸೇವೆ ಮಾಡಿದ್ದಾನೆ, ಅದರಲ್ಲಿ ಅವನದೇನು ತಪ್ಪಿದೆ?

ನ್ಯೂಟನ್‌ನ ಕಾಲದಲ್ಲಿ ನ್ಯೂಟನ್‌ಗಿಂತ ದೊಡ್ಡವರು ಬೇರೆ ಯಾರೂ ಇರಲಿಲ್ಲ. ವಿಜ್ಞಾನದಲ್ಲಿ ಹೊಸ ಹೊಸ ಶೋಧಗಳು ನಡೆಯುತ್ತಲೇ ಇರುತ್ತವೆ. ಇಂದು ಗಣಿತ ಜ್ಞಾನ ಬಹಳ ಬೆಳೆದಿದೆ, ನ್ಯೂಟನ್ ಸಹ ಒಬ್ಬ ವಿದ್ಯಾರ್ಥಿ ಆಗಬೇಕಾಗುವುದು. ಇಂದು ನ್ಯೂಟನ್ ಬರೆದ ಗ್ರಂಥಗಳು ಕೇವಲ ಐತಿಹಾಸಿಕ ಮಹತ್ವವಾದ್ದಾಗಿವೆ. ಆದರೆ ಅಂದಿನ ಕಾಲದಲ್ಲಿ ಅವನ್ನು ಗಣಿತವನ್ನೇ ನಿರ್ಮಿಸಿದ್ದ. ಅವನೊಬ್ಬ ಶ್ರೇಷ್ಠ ಗಣಿತ ತಜ್ಞನಾಗಿದ್ದ. ಜನರು ಅವನಿಗೆ ಅಂದರು, "ನೀವು ಮಹಾನ್ ಗಣಿತ ತಜ್ಞರಾಗಿದ್ದೀರಿ; ನಿಮಗೆ ಗಣಿತದ ಬಗ್ಗೆ ಬಹಳ ಜ್ಞಾನವಿದೆ." ಆ ನ್ಯೂಟನ್ ಗಣಿತದ ಪರಿಭಾಷೆಯಲ್ಲಿಯೇ ಮಾರ್ಮಿಕವಾದ ಉತ್ತರ ಕೊಟ್ಟ–

ಜ್ಞಾನ ಸಮುದ್ರ ಹರಡಿದೆ ಅಲ್ಲಿ
ಬಿಂದುಗಳೆಷ್ಟಿವೆ ಅದರಲ್ಲಿ
ಲೆಕ್ಕವೇ ಅಲ್ಲಿಲ್ಲ.
ಬಿಂದು ಸಿಂಧುವೂ ಆದಲ್ಲಿ
ಬಿಂದುವಿನಷ್ಟೂ ಜ್ಞಾನ
ಇಲ್ಲವೊ ನನ್ನಲ್ಲಿ.

ಹಾಗೆ ನೋಡಿದರೆ ಶಾಸ್ತ್ರಗಳೆಲ್ಲವೂ ಅಪೂರ್ಣವೇ. ಪೂರ್ಣ ಜ್ಞಾನದ ಹೋಲಿಕೆಯಲ್ಲಿ ನ್ಯೂಟನ್‌ನ ಜ್ಞಾನ ಏನೂ ಇರಲಿಲ್ಲ. ಇಂದು ಗಣಿತ ಶಾಸ್ತ್ರ ಕೂಡ ಇಷ್ಟೊಂದು ವಿಕಸಿತವಾಗಿದ್ದರೂ ಸಹ ಪೂರ್ಣಜ್ಞಾನದ ಎದುರಿನಲ್ಲಿ ಶೂನ್ಯವತ್ತೇ ಆಗಿದೆ. ಆ ಸಂದರ್ಭದಲ್ಲಿ ನ್ಯೂಟನ್‌ನ ಆ ಉಕ್ತಿ ಯಥಾರ್ಥವೇ ಆಗಿತ್ತು, ಸುಳ್ಳ ವಿನಯವಾಗಿರಲಿಲ್ಲ. ನ್ಯೂಟನ್‌ನ ನಮ್ರತೆ ಮತ್ತು ನಿರಹಂಕಾರತೆಗೆ ಇದೊಂದು ಉದಾಹರಣೆ.

ಹೀಗೆ ಕಾಮವಾಸನೆಯ ಮೇಲೆ ಜಯ, ನಮ್ರತೆ, ನಿರಹಂಕಾರತೆ ಇವುಗಳಿಗಿಂತ ದೊಡ್ಡದಾದ ಅಧ್ಯಾತ್ಮ ಬೇರೆ ಯಾವುದಿರಲು ಸಾಧ್ಯ? ಆದ್ದರಿಂದ ವಿಜ್ಞಾನ ಕೂಡ ಕೊನೆಯಲ್ಲಿ ಆತ್ಮಜ್ಞಾನ ಅಥವಾ ಅಧ್ಯಾತ್ಮವೇ ಆಗಿದೆ. ವಸ್ತುತಃ ಅಧ್ಯಾತ್ಮ ಮತ್ತು ವಿಜ್ಞಾನ ಎರಡೂ ವಿಜ್ಞಾನವೂ ಆಗಿವೆ, ಅಧ್ಯಾತ್ಮವೂ ಆಗಿವೆ.

ನಾನು ಬ್ರಹ್ಮನ ಹೆಸರು ತೆಗೆದುಕೊಂಡೇ ಬ್ರಹ್ಮಚಾರಿಯಾಗಿ ಉಳಿದೆ ಮತ್ತು ಸಾಕ್ಷಾತ್ ಬ್ರಹ್ಮನ ಶೋಧನೆಯ ಹುಚ್ಚು ನನ್ನದಾಗಿತ್ತು. ನ್ಯೂಟನ್‌ನಿಗೆ

ಬ್ರಹ್ಮನದಲ್ಲ, ಗಣಿತದ ಹುಚ್ಚು ಇತ್ತು. ಯಾವ ರೀತಿ ಆತ್ಮಜ್ಞಾನಿಯು ಅಂತರಾತ್ಮನ ಶೋಧನೆಗಾಗಿ ಅಪರಿಗ್ರಹಿಯೂ, ಬ್ರಹ್ಮಚಾರಿಯೂ ಆಗಿರುತ್ತಾನೋ ಅದೇ ರೀತಿ ವಿಜ್ಞಾನಿಯೂ ಸತ್ಯದ ಶೋಧನೆಯಲ್ಲಿ ಪೂರ್ಣ ತನ್ಮಯನಾಗಿ ತೊಡಗಿಕೊಂಡಿರುತ್ತಾನೆ. ವಿಷಯಭೋಗ ಅವನನ್ನು ಬಿಟ್ಟು ಹೋಗುತ್ತದೆ, ಜೀವನ ಸಂಯಮಗೊಳ್ಳುತ್ತದೆ. ನ್ಯೂಟನ್ ತನ್ನ ಕಾರ್ಯದಲ್ಲಿ ಇಷ್ಟೊಂದು ತನ್ಮಯನಾಗಿದ್ದನಲ್ಲ ಅವನಿಗೆ ಪೂರ್ಣ ವೀರ್ಯದ, ಪೂರ್ಣ ಬ್ರಹ್ಮಚರ್ಯದ ಅಗತ್ಯವಿತ್ತು; ಏಕೆಂದರೆ ಅವನಿಗೆ ಪ್ರಜ್ಞೆಯ ಅತ್ಯಗತ್ಯವಿತ್ತು. ಯಾರು ಪ್ರಜ್ಞೆಯ ಅಗತ್ಯವನ್ನು ತಿಳಿದಿರುತ್ತಾರೋ ಅವರು ವೀರ್ಯವನ್ನು ನಷ್ಟಮಾಡಿಕೊಳ್ಳುವುದಿಲ್ಲ. ಗಣಿತದ ಹುಚ್ಚಿನ ಕಾರಣದಿಂದ ನ್ಯೂಟನ್‌ಗೆ ಬ್ರಹ್ಮಚರ್ಯ ಸಹಜವಾಯಿತು. ಆ ಕಾರಣದಿಂದಾಗಿ ಅವನು ಕ್ರೋಧದ ಮೇಲೆಯೂ ಜಯ ಪಡೆದ. ಹೀಗೆ ಯಾವುದಾದರೊಂದು ಉನ್ನತ ಉದ್ದೇಶ್ಯದಲ್ಲಿ ತನ್ಮಯರಾದಲ್ಲಿ ಬ್ರಹ್ಮಚರ್ಯ ಸರಳವಾಗಿಬಿಡುತ್ತದೆ. ವಾಸನೆಗಳು ಇಲ್ಲದಾಗುತ್ತವೆ. ರೂಪಾಂತರಗೊಳ್ಳುತ್ತವೆ. ನ್ಯೂಟನ್‌ನ ಬಗ್ಗೆ ನನಗೆ ಬಹಳ ಆದರವಿದೆ. ಈ ಕಥೆಯನ್ನು ನಾ ಎಂದೂ ಮರೆಯುವುದಿಲ್ಲ.

ನನಗಂತೂ ಮುಖ್ಯವಾಗಿ ವಿಜ್ಞಾನದ ವಿಕಾಸ ಕುರಿತು ತುಡಿತವಿದೆ. ಆದ್ದರಿಂದ ನಾನು ಅಹಿಂಸೆಯ ಹಿಂದೆ ಬಿದ್ದಿದ್ದೇನೆ. ಅಹಿಂಸೆಯ ಬಗ್ಗೆ ನನ್ನಲ್ಲಿ ವಿಜ್ಞಾನ ಪ್ರೇರಿತವಾದ ಪ್ರೀತಿಯಿದೆ. ವಿಜ್ಞಾನ, ಆತ್ಮಜ್ಞಾನ, ವಿಶ್ವಾಸ ಇವು ಇಂದಿನ ಯುಗದ ಬೇಡಿಕೆ. ನಾನೊಂದು ಶ್ಲೋಕವನ್ನೇ ಮಾಡಿದ್ದೇನೆ:-

ವೇದಾಂತೋ ವಿಜ್ಞಾನ ವಿಶ್ವಾಸ್‌ಶ್ಚೇತಿ ಶಕ್ತಯಃ ತಿಸ್ರಃ।
ಯಾಸಾಂ ಸ್ಥೈರ್ಯೆ ನಿತ್ಯಂ ಶಾಂತಿ – ಸಮೃದ್ಧಿ ಭವಿಷ್ಯತೋ ಜಗತಿ।

ಅಂದರೆ ಜಗತ್ತಿನಲ್ಲಿ ಮೂರು ಶಕ್ತಿಗಳಿವೆ: ವೇದಾಂತ, ವಿಜ್ಞಾನ ಮತ್ತು ವಿಶ್ವಾಸ. ಈ ಮೂರು ಶಕ್ತಿಗಳ ಸಹಾಯದಿಂದ ಜಗತ್ತಿನಲ್ಲಿ ಶಾಂತಿ ಮತ್ತು ಸಮೃದ್ಧಿ ಬರುವವು.

ಯಾವ ರೀತಿ ನ್ಯೂಟನ್‌ನ ಶೋಧನೆಯಿತ್ತೋ ಅದೇ ರೀತಿ ಸಮಾಜಶಾಸ್ತ್ರದಲ್ಲಿ ಇದೂ ಒಂದು ಸಂಶೋಧನೆ. ★

('ಮೈತ್ರಿ' ಸಾಭಾರ, ಅನು : ಸು. ಕಾ.)

ಪ್ರಕೃತಿ ವಿಕೋಪ

– ಸುರೇಂದ್ರ ಕೌಲಗಿ

ಪ್ರಕೃತಿ ವಿಕೋಪ ಮಾನವಕುಲಕ್ಕೆ ಹೊಸತೇನಲ್ಲ. ಸೃಷ್ಟಿಯ ರಚನೆಯೊಂದಿಗೇ ಅದರ ವಿನಾಶದ ರೀತಿಯೂ ಬೆಳೆದುಬಂದಿದೆ. ಯಾವ ರೀತಿ ಹಗಲಿನ ಹಿಂದೆ ರಾತ್ರಿ ಇದೆಯೋ ಅದೇ ರೀತಿ ಸೃಷ್ಟಿಯ ಹಿಂದೆ ಲಯವೂ ಇದೆ. ಇತ್ತೀಚಿನ ಗುಜರಾತ್ ಭೂಕಂಪನವು ಪ್ರಕೃತಿ ನಿಯಮನದ ಅಂಥ ಉದಾಹರಣೆ. ಪೂರ್ವಕಾಲಕ್ಕಿಂತಲೂ ಇಂದಿನ ಕಾಲದಲ್ಲಿ ಒಂದು ಅನುಕೂಲವೇನೆಂದರೆ ಈಗ ಮನುಷ್ಯನ ಬಳಿ ವೈಜ್ಞಾನಿಕ ಸಂಶೋಧನೆಗಳ ಬಲವಿದೆ. ಪ್ರಕೃತಿಯಲ್ಲಿ ನಡೆಯುವ ಸೂಕ್ಷ್ಮಾತಿ ಸೂಕ್ಷ್ಮ ಬದಲಾವಣೆ, ಬೆಳವಣಿಗೆ ಇತ್ಯಾದಿಗಳ ಬಗ್ಗೆ ನಿಖರವಾಗಿ ತಿಳಿಯಲು ಅವನಿಗೆ ಸಾಧ್ಯವಾಗುತ್ತಿದೆ. ಮೂಢನಂಬಿಕೆಗಳು ವೈಜ್ಞಾನಿಕ ತಿಳುವಳಿಕೆಗೆ ತಲೆಬಾಗುತ್ತಿವೆ; ಪುರಾತನ ಧರ್ಮಗಳು ತಮ್ಮ ಪ್ರಾಚೀನ ಸಂಕುಚಿತ ಅರ್ಥಗಳನ್ನು ಕಳಚಿಕೊಳ್ಳುತ್ತಿವೆ ಮತ್ತು ಮಾನವೀಯ ಮೌಲ್ಯಾಧಾರಿತವಾಗಿ ನಿಜವಾದ ಸನಾತನ ಧರ್ಮಗಳಾಗಿ ಪ್ರಕಾಶಗೊಳ್ಳುತ್ತಿವೆ. ಅಸ್ಪೃಶ್ಯತಾ ಆಚರಣೆಯಂಥ ಪಾಪದ ಫಲವಾಗಿ ಬಿಹಾರ್‌ನಲ್ಲಿ ಭೂಕಂಪವಾಯಿತೆಂದು ಗಾಂಧೀಜಿ ಹೇಳಿದಂಥ ಮಾತಿಗಾಗಲೀ, ಕ್ರಿಶ್ಚಿಯನ್ನರ ಮೇಲಿನ ದಾಳಿಯಿಂದಾಗಿ ಗುಜರಾತ್‌ನಲ್ಲಿ ಭೂಕಂಪನವಾಯಿತೆಂಬ ಓರ್ವ ಮಂತ್ರಿ ಮಹೋದಯರ ಮಾತಿಗಾಗಲೀ ಯಾವ ಸಾಂದರ್ಭಿಕ ಅರ್ಥವಿಲ್ಲವೆಂದೂ, ಅದು ಕೇವಲ ಆಯಾ ವ್ಯಕ್ತಿಯ ಭಾವನಾಲೋಕದ ಅನಿಸಿಕೆಗಳೆಂದೂ ಜನರು ತಿಳಿಯುತ್ತಿದ್ದಾರೆ.

ಪ್ರಪಂಚದ ಇತರ ಯಾವುದೇ ಭಾಗದಲ್ಲಿ ನಡೆಯುವ ಪ್ರಾಕೃತಿಕ ವಿಕೋಪಗಳು ಇಂದು ಮನುಷ್ಯನ ಮುಂದೆ ಎರಡು ಪ್ರಮುಖ ಪ್ರಶ್ನೆಗಳನ್ನು ತಂದಿಟ್ಟಿವೆ; ಒಂದನೆಯದು, ಮನುಷ್ಯನು ಪ್ರಕೃತಿಯೊಂದಿಗಿರುವ ಸಹಜೀವಿಯೋ ಅಥವಾ ಅದರ ನಿಯಂತ್ರಕನೇ ಎಂಬುದು; ಎರಡನೆಯದು, ವಿಜ್ಞಾನ ಮತ್ತು ತಂತ್ರಜ್ಞಾನಗಳ ಅನ್ವಯ ಎಷ್ಟು, ಹೇಗೆ ಮತ್ತು ಎಲ್ಲಿ ಹಾಗೂ ಅವುಗಳನ್ನು ತೀರ್ಮಾನಿಸುವವರು ಯಾರು ಎಂಬುದು.

ಪ್ರಕೃತಿ ವಿಕೋಪವೆಂಬುದು ಮೂಲತಃ ಅದರ ಸಹಜ ಪ್ರಾಕೃತಿಕ ಸ್ವಭಾವ, ಜೀವಿಗೆ ಮರಣವೆಂಬ ರೀತಿಯಲ್ಲಿ. ಆದರೆ ಈಗ ಮನುಷ್ಯ ಪ್ರಕೃತಿಯ ಈ ಸಹಜ ಸ್ವಭಾವವನ್ನು ತಿದ್ದುವ ಕೆಲಸಕ್ಕೆ ಕೈಹಾಕಿದ್ದಾನೆ; ಇದು ಪ್ರಕೃತಿ ವಿಕೋಪದಿಂದ ರಕ್ಷಣೆ ಪಡೆಯುವ ಪ್ರಯತ್ನದ ಹಿಂದಿರುವ ವಿಚಾರಕ್ಕಿಂತ ಭಿನ್ನವಾದುದು. ಪ್ರಕೃತಿಯಿಂದ ರಕ್ಷಣೆ ಪಡೆಯುವುದು ಬೇರೆ, ಪ್ರಕೃತಿಯನ್ನೇ ಪುನರ್ ರಚಿಸುವುದು ಬೇರೆ. ಹತ್ತೊಂಬತ್ತನೇ ಶತಮಾನದಿಂದೀಚೆಗೆ ವಿಜ್ಞಾನಿ

ಗಳು ಬಹುದೊಡ್ಡ ಪ್ರಮಾಣದಲ್ಲಿ ಪ್ರಕೃತಿಯನ್ನು ಮನುಷ್ಯನಿಗೆ ಅನುಕೂಲವಾಗುವ ರೀತಿಯಲ್ಲಿ ಪುನರ್-ರಚಿಸುವ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರಕೃತಿ ಸಹಜವಾಗಿ ಹರಿದು ಸಾಗರವನ್ನು ಸೇರುವ ನದಿಗಳಿಗೆ ಬೃಹತ್ ಅಣೆಕಟ್ಟುಗಳನ್ನು ಮನುಷ್ಯ ನಿರ್ಮಿಸುತ್ತಿದ್ದಾನೆ; ಸಹಜವಾಗಿ ಬೆಳೆದು ನಿಂತಿರುವ ಕಾಡುಗಳನ್ನು ನೆಲಸಮಮಾಡಿ ನಗರಗಳನ್ನು ನಿರ್ಮಿಸುತ್ತಿದ್ದಾನೆ; ಸಹಜವಾಗಿ ನೆಲದ ಮೇಲೆ ವಾಸವಾಗಿರಬೇಕಾದ ಮನುಷ್ಯನನ್ನು ಗಗನಚುಂಬಿ ಕಟ್ಟಡಗಳಲ್ಲಿ ಇರುವಂತೆ ಮಾಡಿ ಅವನಿಂದ ಭೂ ಸಂಪರ್ಕವನ್ನೇ ತಪ್ಪಿಸುತ್ತಿದ್ದಾನೆ; ಸಹಜವಾಗಿ ವೈವಿಧ್ಯತೆಗಳನ್ನು ಪಡೆದಿರುವಂಥ ಸಸ್ಯ ಮತ್ತು ಪ್ರಾಣಿಗಳ 'ಪ್ರತಿರೂಪ'ಗಳನ್ನು ತಯಾರಿಸಿ ಅವುಗಳನ್ನು ಯಂತ್ರ ಸದೃಶವಾಗಿ ಮಾಡುತ್ತಿದ್ದಾನೆ; ಸಹಜವಾಗಿ ಮೃತವಾಗುತ್ತಿರುವ ಜೀವಕಣಗಳನ್ನು ಚಿರಂಜೀವಿಗಳಾಗುವಂತೆ ಮಾಡುತ್ತಿದ್ದಾನೆ; ಸಹಜವಾಗಿ ನಿಧಾನಗತಿಯಲ್ಲಿ ಚಲಿಸುವ ಮತ್ತು ಯೋಚನೆ ಮಾಡುವ ಮನುಷ್ಯನ ಕಾಲಿಗೆ ಅತ್ಯಂತ ವೇಗವನ್ನೂ, ಯೋಚನಾ ಸಾಮರ್ಥ್ಯಕ್ಕೆ ಅತ್ಯಂತ ತೀವ್ರತೆಯನ್ನೂ ಒದಗಿಸುತ್ತಿದ್ದಾನೆ. ಹೀಗೆ ಜೀವನದ ಎಲ್ಲ ರಂಗಗಳಲ್ಲಿ ಮನುಷ್ಯನು ಪ್ರಕೃತಿಯ ಪುನರ್ ರಚನೆಯಲ್ಲಿ ತೊಡಗಿದ್ದಾನೆ. ಪ್ರಕೃತಿ ಪುನರ್ ರಚನೆಯ ಅವನ ಈ ಪ್ರಯತ್ನಗಳನ್ನು ಪ್ರಕೃತಿ ಸಹಿಸದೆ ವಿಕೋಪವನ್ನು ಪ್ರಕಟಗೊಳಿಸುತ್ತದೆ ಎಂದೂ ಅನೇಕ ವಿಜ್ಞಾನಿಗಳು ಹೇಳುತ್ತಿದ್ದಾರೆ. ಆದ್ದರಿಂದ ಪುನರ್‌ರಚನೆಯ ಮನುಷ್ಯನ ಈ ನೀತಿ, ಈ ರೀತಿ ಸರಿಯೋ ಎಂಬುದನ್ನು ನಿರ್ಧರಿಸುವವರು ಯಾರು? ಅಂತಿಮ ತೀರ್ಮಾನ ಯಾರದು? ಈ ಪ್ರಶ್ನೆಗಳಿಗೆ ಉತ್ತರ ಎಲ್ಲಿಂದ, ಯಾರಿಂದ ಮತ್ತು ಯಾವಾಗ ಬರುತ್ತದೆಂಬುದು ಕುತೂಹಲಕಾರಿ ನಿರೀಕ್ಷಣೆಯಾಗಿದೆ.

ಈ ವಿಚಾರಗಳೇನೇ ಇರಲಿ, ಒಂದು ಮಾತಂತೂ ನಿಜ. ಪ್ರಕೃತಿ ವಿಕೋಪಗಳು ಇಂದು **"ವಸುಧೈವ ಕುಟುಂಬಕಂ"** ಎಂಬ ಆರ್ಷೇಯ ಮಾತನ್ನು ನಿಜವಾಗಿಸಿವೆ. ಗುಜರಾತ್ ಭೂಕಂಪನದಲ್ಲಿ ಸಂತ್ರಸ್ತರಾದ ಲಕ್ಷಾಂತರ ಜನರಿಗೆ ನೆರವು ನೀಡಲು ಪ್ರಪಂಚದ ಮೂಲೆಮೂಲೆಯಿಂದ ಸ್ಪರ್ಧೆ ಉಂಟಾಗುತ್ತಿದೆ. ಎಲ್ಲ ವಿಧವಾದ ಧಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ಭಿನ್ನತೆಗಳನ್ನು ದಾಟಿ ಸಹಾಯ ಬರುತ್ತಿದೆ. ಪ್ರಪಂಚದ ದೊಡ್ಡ ಸಾಹಿತ್ಯಕಾರ ಶೇಕ್ಸಪೀಯರ್ ಹೇಳಿದ ಈ ಮಾತು, "ಪ್ರಕೃತಿಯ ಒಂದು ಸ್ಪರ್ಶ ಇಡೀ ವಿಶ್ವವನ್ನೇ ಒಂದು ಕುಟುಂಬವನ್ನಾಗಿ ಮಾಡುತ್ತದೆ" ಎಂಬುದು ಎಷ್ಟು ನಿಜ ಎಂಬುದು ನಮಗೆ ಈಗ ಗೊತ್ತಾಗುತ್ತಿದೆ. ಅಲ್ಲದೆ ೧೦,೦೦೦ ವರ್ಷಗಳಷ್ಟು ಹಿಂದೆಯೇ

ಪುಟ ನೋಡಿ

ಋಗ್ವೇದದಲ್ಲಿ "ವಿಶ್ವಮಾನುಷಃ" ಎಂಬ ಮಾತನ್ನು ಹೇಳಲಾಗಿದೆ. ಅಂದರೆ ನಾವು ಎಲ್ಲ ಪ್ರಕಾರದ ಭಿನ್ನತೆಗಳನ್ನು ಮೀರಿ ಹೊಸ ಮಾನವನನ್ನು ಸೃಷ್ಟಿಸ ಬೇಕಿದೆ ಎಂಬ ಆ ಆಶಯು ನಿಜವಾಗುವ ಸೂಚನೆಗಳು ಕಂಡುಬರುತ್ತಿವೆ. ಮಹಾ ಭಾರತದಲ್ಲಿ ವೇದವ್ಯಾಸರು ಹೇಳಿದಂತೆ:-

ಸರ್ವೇಷಾಂ ಯಃ ಸುಹೃತ್ ನಿತ್ಯಂ ಸರ್ವೇಷಾಂ ಚಹಿತೆ ರತಃ।
ಕರ್ಮಣಾ ಮನಸಾ ವಾಚಾ ಸ ಧರ್ಮಂ ವೇದ ನೇತರಃ।

ಯಾರು ಎಲ್ಲರ ಹಿತದಲ್ಲಿ ಸದಾ ಮಗ್ನರೋ, ಯಾರು ಮನಸ್ಸು-ವಚನ-ಕರ್ಮ ದಲ್ಲಿ ಎಲ್ಲರ ಮಿತ್ರನೋ ಅಂಥದು ಮಾತ್ರ ಧರ್ಮ ಬೇರೆಯದು ಅಲ್ಲ ಎಂಬ ಮಾತು ನಮಗೆ ಗುಜರಾತ್ ಭೂ ಸೀಳಿನಿಂದ ಪ್ರತಿಧ್ವನಿಸುತ್ತಿದೆ. ✦

ಸನ್ಮಾನ್ಯರಿಂದ............

ನೀವು ಅಕಸ್ಮಾತ್ತಾಗಿ ಭೇಟಿಯಾದಾಗ ಕೊಟ್ಟ 'ಜನಪದ ವಿಚಾರ' ಮಾಸಿಕ ಪತ್ರಿಕೆ ಓದಿದೆ. ೪-೫ ಲೇಖನಗಳನ್ನು ಆರಿಸಿ ಆರಿಸಿ ಓದಿ ನೋಡಿದೆ. ಒಂದಕ್ಕಿಂತ ಒಂದು ಚನ್ನಾಗಿವೆ. ಅದು ಇನ್ನಷ್ಟು ಬೆಳೆದು ಜನಸೇವೆ ಮಾಡ ಲೆಂದು ಹೃತ್ಪೂರ್ವಕವಾಗಿ ಹಾರೈಸಿ ನನ್ನ ಚಂದಾ ಹಣ ರೂ. ೧೦೦ ಇದರ ಜೊತೆಗೆ ಕಳಿಸಿದ್ದೇನೆ. ಪ್ರತಿ ತಿಂಗಳೂ ಕಳಿಸಿಕೊಡಿ.

ಬೆಂಗಳೂರು — **-ಮಾಧವ ಕೌಜಲಗಿ**

★

"ಜನಪದ ವಿಚಾರ" ಪತ್ರಿಕೆಯು ಆಗಸ್ಟ ತಿಂಗಳ ಸಂಚಿಕೆ ತಲುಪಿದೆ. ಪತ್ರಿಕೆ ಒಟ್ಟಾರೆ ಉಪಯುಕ್ತವಾಗಿ ಹೊರಬರುತ್ತಿದೆ. ಇಂಥ ಪತ್ರಿಕೆಗಳು ಶಾಲಾ, ಕಾಲೇಜು. ಗ್ರಂಥಾಲಯಗಳ ಮೂಲಕ ಗರಿಷ್ಠ ಸಂಖ್ಯೆಯಲ್ಲಿ ಯುವ ಜನರಿಗೆ ತಲುಪಬೇಕೆಂಬುದು ನನ್ನಂಥವರ ಆಶಯ. ಈ ಸಾಧನೆ ಕಷ್ಟಸಾಧ್ಯ ಎಂಬುದನ್ನು ಅರಿತೂ ಈ ಆಶಯ ಹೊಂದಿರುವೆ.

ಬೆಂಗಳೂರು — **- ಮಂಗ್ಳೂರು ವಿಜಯ**

★

ವಾಚಕರಲ್ಲಿ ವಿನಂತಿ

"ಜನಪದ ವಿಚಾರ"ವನ್ನು ತಮ್ಮ ಸ್ನೇಹಿತರಿಗೂ, ಬಂಧು ಗಳಿಗೂ ಪರಿಚಯ ಮಾಡಿಕೊಟ್ಟು ಅದರ ಅಭಿವೃದ್ಧಿಗೆ ಸಹಕರಿಸ ಬೇಕಾಗಿ ವಿನಂತಿ. -ಪ್ರಕಾಶಕರು

ಓದುಗರ ವಿಚಾರ...............

ಪ್ರಾಣಿವಧೆ : ಒಂದು ಚಿಂತನೆ

–ವಿರೂಪಾಕ್ಷಿ ಪೂಜಾರಹಳ್ಳಿ

ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತಕ್ಕೆ ವನ್ಯಜೀವಿಗಳ ಹತ್ಯೆಯನ್ನು ನಿಲ್ಲಿಸುವುದೇ ಬಹುದೊಡ್ಡ ಸವಾಲು. ಕಾಯ್ದೆ ಕಾನೂನುಗಳನ್ನು ರೂಪಿಸಿದರೂ ಅವು ಸಾರ್ಥಕತೆಯನ್ನು ಪಡೆಯುವಲ್ಲಿ ಸಂಪೂರ್ಣ ವಿಫಲವಾಗಿವೆ. ಹೀಗಾಗಿ ಪ್ರಾಣಿವಧೆಯನ್ನು ನಿಷೇಧಿಸುವಲ್ಲಿ ಕ್ರಾಂತಿಕಾರಿ ಬದಲಾವಣೆಯಾಗಬೇಕಾಗಿದೆ. ಈಗಾಗಲೇ ಬೇಟೆಯ ನಿಷೇಧ ಕುರಿತ ಕಾಯ್ದೆಗಳನ್ನು ರೂಪಿಸಿದರೂ ಅವು ಜನಸಾಮಾನ್ಯರ ಮಟ್ಟಕ್ಕೆ ತಲುಪಿಲ್ಲ.

ಹುಲಿ ಬೇಟೆ, ಆನೆ ಬೇಟೆಗಳಿಂದ ಸಾಕಷ್ಟು ನಷ್ಟವಾಗಿರುವುದು ಪ್ರಾಣಿಗಳ ಇತಿಹಾಸದಲ್ಲಿ ಒಂದು ದುರಂತ ಘಟನೆ. ವಧೆಗೊಳಗಾಗುವ ಕಾಡು ಪ್ರಾಣಿಗಳೆಂದರೆ: ಮೊಲ, ಜಿಂಕೆ, ಉಡ, ಕಾಡುಬೆಕ್ಕು, ಹಂದಿ ಮೊದಲಾದವು; ಸಾಕು ಪ್ರಾಣಿಗಳೆಂದರೆ: ಕುರಿ, ಮೇಕೆ, ಹಸು, ಎತ್ತು. ಕೋಣ, ಎಮ್ಮೆ, ಹೋರಿ ಇತ್ಯಾದಿ. ಸರ್ಕಸ್‌ಗಳಲ್ಲಿ ಕರಡಿ, ಹುಲಿ, ಚಿರತೆ, ಜಿಂಕೆ, ತೋಳ ಮೊದಲಾದ ಪ್ರಾಣಿಗಳಿಗೆ ಹಿಂಸಿಸುವುದನ್ನು ಇಂದಿಗೂ ನೋಡಬಹುದಾಗಿದೆ. ಗೋಹತ್ಯೆ ಪ್ರಕರಣಗಳು ಇಂದು ಸರ್ವೇ ಸಾಮಾನ್ಯವಾಗಿವೆ.

ಇಂದು ಅವ್ಯಾಹತವಾಗಿ ನಡೆಯುವ ಪ್ರಾಣಿವಧೆಗಳಲ್ಲಿ ಮೊದಲ ಸ್ಥಾನ ಪಡೆದಿರುವುದು ಗೋಹತ್ಯೆ. ಭಾರತದಲ್ಲಿ ೩೨,೦೦೦ ಅನಧಿಕೃತ ಕಸಾಯಿಖಾನೆಗಳಿವೆ ಎಂದು ಅಂದಾಜಿಸಲಾಗಿದೆ. ಪ್ರಾಣಿವಧೆಯ ಪರವಾನಿಗೆ ಹೊಂದಿದ ೩೬೦೦ ಅಧಿಕೃತ ಅಂಗಡಿಗಳಿದ್ದು, ಒಂದು ವರದಿಯಂತೆ ೧೯೭೮ ರಲ್ಲಿ ೭೬ ಸಾವಿರ ಟನ್ ಗೋಮಾಂಸ ಸಿದ್ಧವಾಗುತ್ತಿತ್ತು. ಇಂದು ೧೫ ಲಕ್ಷ ಟನ್ ಗೋಮಾಂಸ ಉತ್ಪಾದನೆಯಾಗುವುದು. ಪ್ರತಿದಿನ ಇದನ್ನು ಸೇವಿಸುವವರ ಸಂಖ್ಯೆ ದ್ವಿಗುಣಗೊಳ್ಳುವುದರಿಂದ ಅಪಾರ ಬೇಡಿಕೆಯನ್ನು ಹೊಂದಿದೆ. ಭಾರತದ ಪ್ರಾಣಿಗಳ ಪೈಕಿ ಗೋವುಗಳು ಸುಮಾರು ೬ ಕೋಟಿ ಇವೆ ಎನ್ನಲಾಗಿದೆ.

ಗ್ರಾಮೀಣ ಆರ್ಥಿಕ ಸಂಪತ್ತಿನಲ್ಲಿ ಗೋಸಂಪತ್ತಿನದೇ ಪ್ರಮುಖ ಪಾತ್ರ. ಹಾಲು, ಸಗಣಿ, ಗೋಮೂತ್ರ, ಗೊಬ್ಬರ ಹೀಗೆ ಗೋವಿನಿಂದ ನಾನಾ ಉಪಯೋಗವಿದೆ. ಪ್ರಾಣಿ ಗೋಹತ್ಯೆ ನಿಷೇಧವನ್ನು ಅಲ್ಪಸಂಖ್ಯಾತರು ವಿರೋಧಿಸುವರೆಂಬ ಭಾವನೆಯಿದೆ. ಜನರಲ್ಲಿ ದಯೆ, ಕರುಣೆ, ಅಹಿಂಸೆ, ಪ್ರೀತಿಯ ಮನೋಭಾವಗಳು ಮೇಳೈಸಬೇಕಾಗಿದೆ. ★

ಜಾತಿ ವಿಷಯದ ಜಾಗತೀಕರಣ ಸರಿಯೇ
ಒಂದು ಪ್ರತಿಕ್ರಿಯೆ

– ಮಂಗ್ಳೂರು ವಿಜಯ

ಆಗಸ್ಟ್ ಸಂಚಿಕೆಯಲ್ಲಿ "ಜಾತಿ ಭೇದ ವಿಷಯದ ಜಾಗತೀಕರಣ ಸರಿಯೇ?" ವಿಷಯ ಕುರಿತ ನಿಮ್ಮ ಲೇಖನ ಓದಿದೆ. ಧರ್ಮಗಳು ಕಾರಣವಾಗಿಲ್ಲವೇ ಎಂಬ ಒಂದು ಪ್ರಶ್ನೆಗೆ ಮಾತ್ರ ನಾನು ನಕಾರಾತ್ಮಕವಾಗಿ ಉತ್ತರಿಸಿ ಉಳಿದೆಲ್ಲ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಯಸುವೆ.

ಇನ್ನು 'ಯಾವುದೇ ಸಾಮಾಜಿಕ ಭೇದ .... ಗಗನಕ್ಕೆ ಒಯ್ದರೆ ಸಾಧ್ಯವಾದೀತೇ?' ಎಂದು ಕೇಳಲಾಗಿರುವ ಪ್ರಶ್ನೆ, (ಪುಟ–7) ವರ್ಣಭೇದವು ವಿಶ್ವಸಂಸ್ಥೆ ಸಭೆಯಲ್ಲಿ ಚರ್ಚೆಯಾಗಬೇಕೆಂಬ ಭಾರತ ಎಂದಿನಿಂದಲೂ ಒತ್ತಾಯಿಸುತ್ತಾ ಬಂದಿದೆ. ನೀವು ಕೇಳಿರುವ ಮೇಲಿನ ಪ್ರಶ್ನೆಯಂತೆ ವರ್ಣಭೇದ ವಿಷಯ ಕೂಡ ಯಾವ್ಯಾವ ರಾಷ್ಟ್ರದಲ್ಲಿ ಜಾರಿಯಲ್ಲಿದೆಯೋ ಅಲ್ಲಿ ಮಾತ್ರ ಚರ್ಚೆಗೆ ಒಳಗಾಗಬೇಕಾಗುವುದರಿಂದ ಆ ವಿಷಯವನ್ನೂ ವಿಶ್ವಸಂಸ್ಥೆಯ ಸಭೆಯಿಂದ ಹೊರಗಿಡಬೇಕಾಗುತ್ತದೆ. ಪ್ರತಿಯೊಂದು ರಾಷ್ಟ್ರ ತನ್ನೊಳಗಿನ ಸಮಸ್ಯೆಯನ್ನು ತನ್ನೊಳಗೇ ಚರ್ಚಿಸಿಕೊಳ್ಳುವುದು ಸೂಕ್ತ ಎಂದಾದರೆ ವರ್ಣದ್ವೇಷ ವಿಷಯ ಚರ್ಚೆಯಾಗಲಿ ಎಂದು ವರ್ಣದ್ವೇಷವನ್ನು ಹೊಂದಿಲ್ಲದ ರಾಷ್ಟ್ರಗಳು ವಿಶ್ವಸಂಸ್ಥೆ ಸಭೆಯಲ್ಲಿ ಮಾತಾಡುವುದು ಅನುಚಿತವಾಗುತ್ತದೆ.

೧೨ ನೇ ಅಂಶವೊಂದನ್ನು ಸೇರಿಸುವುದು ಸೂಕ್ತವಾಗಿತ್ತು. ಅದೆಂದರೆ, "ಡರ್ಬಾನಿನಲ್ಲಿ ಜಾತಿಭೇದ ವಿಷಯ ಚರ್ಚೆಗೆ ಒಳಪಟ್ಟ ಮೇಲಾದರೂ ಒಂದು ಕಾಲಮಿತಿಯಲ್ಲಿ ಹಂತಹಂತವಾಗಿ ಜಾತಿಭೇದವನ್ನು ನಿರ್ಮೂಲನ ಮಾಡಲು ಭಾರತ ಸರ್ಕಾರ ಕ್ರಮಗಳನ್ನು ಕೈಗೊಳ್ಳಬಹುದು; ವಿಶೇಷ ಯೋಜನೆಗಳನ್ನು ರೂಪಿಸಬಹುದು." ನಾನು ಅರ್ಥ ಮಾಡಿಕೊಂಡಿರುವಂತೆ ಇದೂ ವಾದದ ಒಂದು ಪ್ರಮುಖ ಅಂಶವಾಗಿದೆ.

ಜಾತಿಭೇದ ಒಂದು ಕಾಯಿಲೆ, (ಅದು ಒಂದು ಅಪರಾಧವೆಂದೂ ಎನ್ನುತ್ತಾರೆ ಲೇಖಕ ದೇವನೂರ ಮಹಾದೇವ.) ಕಾಯಿಲೆಯನ್ನು ವ್ಯಾಪಕ ಚರ್ಚೆಗೊಳಪಡಿಸಿ, ಪರಿಹಾರ ಕ್ರಮಗಳನ್ನು ತೀರ್ಮಾನಿಸಿ ಕೈಗೊಳ್ಳಲು ಮುಂದಾಗದೇ ಹೋದರೆ ಕಾಯಿಲೆ ಉಲ್ಬಣಗೊಳ್ಳುತ್ತದೆ; ಪ್ರಮಾದ ಜರುಗುವ ಅಪಾಯವಿರುತ್ತದೆ. ಜಾತಿಭೇದ ಕಾಯಿಲೆ ಭಾರತವನ್ನು ಛಿದ್ರಗೊಳಿಸೀತು; ಅಸಹನೆ

ಯನ್ನು ಹೆಚ್ಚಿಸೀತು; ಕಾಯಂಗೊಳಿಸೀತು! ದೇವನೂರು ಮಹಾದೇವರು ತಿಳಿಸಿರುವಂತೆ ಜಾತಿಭೇದ ಒಂದು ಅಪರಾಧ ಎಂದು ಪರಿಗಣಿಸುವುದಾದರೆ, ಅಪರಾಧದ ಬಗ್ಗೆ ಮುಕ್ತ ಚರ್ಚೆಗೆ ಹಿಂದೇಟು ಹಾಕುವುದು ಪಾತಕಿ ಕೃತ್ಯವಾದೀತು. ಈ ಪಾತಕಿ ಕೃತ್ಯಕ್ಕೆ ಭಾರತದ ಈಗಿನ ಜಾತಿವಾದಿ-ಕೋಮುವಾದಿ ಕೇಂದ್ರ ಸರ್ಕಾರ ಮುಂದಾಗುವುದಾದರೆ, ಅಂಥ ಪಾತಕವನ್ನು ಭಾರತದ ಪ್ರಜ್ಞಾವಂತ ಸಮ್ಮತಿಸಬೇಕೆ? ಆದ್ದರಿಂದಲೇ ಒಂದು ರೋಗ ಅಥವಾ ಅಪರಾಧವಾಗಿರುವ ಜಾತಿಭೇದ ವಿಷಯ ವ್ಯಾಪಕವಾಗಿ ಚರ್ಚೆಗೊಳಪಟ್ಟು, ಎಲ್ಲಾ ಸಂಕೀರ್ಣ ಮುಖಗಳು ಬಯಲಾಗಲಿ, ಪರಿಣಾಮಕಾರಿ ಯೋಜನೆಗಳು ರೂಪುಗೊಳ್ಳುವಂತಾಗಲಿ; ವಿಶ್ವಸಂಸ್ಥೆ ಸಭೆಯಲ್ಲಿ ನಿರ್ಣಯವಾಗುವಂತೆ, ಈ ಯೋಜನೆಗಳನ್ನು ಜಾರಿಗೊಳಿಸುವ ವಿಚಾರದಲ್ಲಿಭಾರತ ಅಂತರರಾಷ್ಟ್ರೀಯ ವೇದಿಕೆಯ ಒತ್ತಡಕ್ಕೆ ಗುರಿಯಾದರೂ ಪ್ರಮಾದವೇನಿಲ್ಲವಲ್ಲ?

'ಈ ನಿಟ್ಟಿನಲ್ಲಿ .... ಎಂದು' ಪ್ರಾರಂಭವಾಗುವ ಪ್ಯಾರಾ ಸಮುಚಿತವಾಗೇ ಇದೆ, ಈ ದಿಕ್ಕಿನಲ್ಲಿ ವಿರಾಟ ಪ್ರಯತ್ನ ನಡೆಯಬೇಕಾಗಿದೆ ಎಂಬುದು ಸಮರ್ಥನೀಯ ಸಂಗತಿಯೇ ಆಗಿದೆ. ಸಾಮಾಜಿಕ ಭೇಧ ನಿವಾರಣೆಗೆ ಆಯಾ ಸಮಾಜದಲ್ಲಿರುವವರ ಸಹಕಾರ, ಅರಿವು, ಬಾಂಧವ್ಯಗಳು ಬೇಕು ಎಂಬ ಮಾತು ಸರಿಯಾಗೇ ಇದೆ. ಇದನ್ನು ಒಪ್ಪಿಯೂ ವಿಶ್ವಸಂಸ್ಥೆ ಆಗ್ರಹವು ದುರಾಗ್ರಹವೇನೂ ಆಗದು.★

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ - ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/- ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/- ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಮ್ರ ಕೋರಿಕೆ.

-ಪ್ರಕಾಶಕರು

ಎರಡು ಎತ್ತುಗಳ ಕಥೆ

-ಪ್ರೇಮಚಂದ

(ಸುಪ್ರಸಿದ್ಧ ಹಿಂದೀ ಕಾದಂಬರಿಕಾರ ಪ್ರೇಮಚಂದರ ಈ ವಿಶ್ವವಿಖ್ಯಾತ ಕಥೆಯನ್ನು ಇಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ. ಸ್ವತಂತ್ರ ಭಾರತದಲ್ಲಿಯೂ ಎತ್ತುಗಳ ಸ್ಥಿತಿಯಲ್ಲಿ ಯಾವ ಬದಲಾವಣೆಯಾಗದೇ ಇರುವುದು ದುಃಖದ ಸಂಗತಿಯಾಗಿದೆ. -ಸಂ)

ಝೂರಿ ಕಾಚ್ಛಿ ಎಂಬುವನ ಬಳಿ ವಜ್ರ ಹಾಗೂ ಮುತ್ತು ಎಂಬ ಎರಡು ಎತ್ತುಗಳು ಇದ್ದವು. ಅವೆರಡೂ ಹಳ್ಳಿಕಾರ್ ಜಾತಿಗೆ ಸೇರಿದವಾಗಿದ್ದವು - ನೋಡಲು ಸುಂದರ, ಕೆಲಸದಲ್ಲಿ ಚುರುಕು, ಡುಬ್ಬ ಎತ್ತರ. ಬಹಳ ದಿನ ಒಟ್ಟಿಗೆ ಇದ್ದೂ ಇದ್ದು ಅವುಗಳಲ್ಲಿ ಅಣ್ಣ - ತಮ್ಮರ ಸಂಬಂಧ ಉಂಟಾಗಿತ್ತು. ಅವೆರಡೂ ಎದುರು-ಬದುರು ಅಕ್ಕಪಕ್ಕ ಕುಳಿತು ಪರಸ್ಪರ ಮೂಕಭಾಷೆಯಲ್ಲಿ ವಿಚಾರ-ವಿನಿಮಯ ಮಾಡುತ್ತಿದ್ದವು. ಒಂದರ ಮನಸ್ಸಿನಲ್ಲಿಯ ಮಾತನ್ನು ಇನ್ನೊಂದಕ್ಕೆ ಹೇಗೆ ತಿಳಿಸುತ್ತಿದ್ದವು ಇದು ನಮಗೆ ಗೊತ್ತಿಲ್ಲ. ಜೀವಿಗಳಲ್ಲಿಯೇ ತಾನು ಶ್ರೇಷ್ಠನೆಂದು ಹೇಳಿಕೊಳ್ಳುವ ಮನುಷ್ಯನಿಗೆ ತಿಳಿಯದ ಒಂದು ಗುಪ್ತ ಶಕ್ತಿ ಅವುಗಳಲ್ಲಿತ್ತು. ಅವೆರಡೂ ಒಂದನ್ನೊಂದು ನೆಕ್ಕಿ, ಮೂಸು ನೋಡಿ ತಮ್ಮ ಪ್ರೇಮವನ್ನು ತೋರಿಸುತ್ತಿದ್ದವು. ಕೆಲವೊಮ್ಮೆ ಎರಡೂ ತಮ್ಮ ಕೊಂಬುಗಳನ್ನು ಸಿಕ್ಕಿಸಿಕೊಳ್ಳುತ್ತಿದ್ದವು. ಜಗಳದ ಭಾವನೆಯಿಂದಲ್ಲ. ಕೇವಲ ವಿನೋದ ಭಾವದಿಂದ, ಆತ್ಮೀಯತೆಯ ಭಾವದಿಂದ. ಹೇಗೆ ಮಿತ್ರರಲ್ಲಿ ಹೆಚ್ಚು ಸಲಿಗೆಯಾದಾಗ ಒಬ್ಬರು ಇನ್ನೊಬ್ಬರ ಬೆನ್ನ ಮೇಲೆ ಕೈ ಹಾಕುತ್ತಾರೋ ಹಾಗೆ.

ಇವೆರಡನ್ನೂ ಯಾವಾಗ ಉಳುಮೆ ಮಾಡುವುದಕ್ಕಾಗಲೀ ಅಥವಾ ಗಾಡಿ ಎಳೆಯುವುದಕ್ಕಾಗಲೀ ನೊಗಕ್ಕೆ ಹೂಡಲಾಗುತ್ತಿತ್ತೋ ಮತ್ತು ಅವು ಕತ್ತನ್ನು ಅಲ್ಲಾಡಿಸುತ್ತ ಹೋಗುತ್ತಿದ್ದವೋ ಆಗ ಪ್ರತಿಯೊಂದೂ ತನ್ನ ಕತ್ತಿನ ಮೇಲೆಯೇ ಹೆಚ್ಚು ಭಾರವಿರಲಿ ಎಂದು ಪ್ರಯತ್ನಿಸುತ್ತಿತ್ತು. ದಿನದ ಕೆಲಸದ ನಂತರ ಮಧ್ಯಾಹ್ನ ಅಥವಾ ಸಂಜೆಯಲ್ಲಿ ಅವುಗಳನ್ನು ಬಿಡುಗಡೆ ಮಾಡಿದಾಗ ಒಂದು ಇನ್ನೊಂದನ್ನು ನೆಕ್ಕಿ ತಮ್ಮ ದಣಿವನ್ನು ಆರಿಸಿಕೊಳ್ಳುತ್ತಿದ್ದವು. ಗೊಂತಿನಲ್ಲಿ ಹುಲ್ಲು-ಭೂಸಾ ಹಾಕಿದಾಗ ಎರಡೂ ಒಟ್ಟಿಗೆ ಏಳುತ್ತಿದ್ದವು, ಒಟ್ಟಿಗೆ ಗೊಂತಿನಲ್ಲಿ ಮುಖ ಹಾಕುತ್ತಿದ್ದವು, ಮತ್ತು ಒಟ್ಟಿಗೆ ಕುಳಿತುಕೊಳ್ಳುತ್ತಿದ್ದವು. ಒಂದು ಮುಖವನ್ನು ತೆಗೆದರೆ ಇನ್ನೊಂದೂ ತೆಗೆಯುತ್ತಿತ್ತು.

ಒಮ್ಮೆ ಝೂರಿಕಾಚ್ಚಿ ಆ ಎತ್ತುಗಳನ್ನು ತನ್ನ ಅತ್ತೆ ಮನೆಗೆ ಕಳುಹಿಸಿದ. ತಮ್ಮನ್ನು ಏಕೆ ಕಳುಹಿಸಲಾಗುತ್ತಿದೆ ಎಂಬುದು ಎತ್ತುಗಳಿಗೆ ಹೇಗೆ ಗೊತ್ತು? "ನಮ್ಮನ್ನು ಯಜಮಾನ ಮಾರಿದ್ದಾನೆ" ಎಂದು ಅವು ತಿಳಿದವು. ಈ ರೀತಿ ಮಾರಾಟದಿಂದ ಅವುಗಳಿಗೆ ಒಳ್ಳೆಯದೆನಿಸಿತೆ, ಕೆಟ್ಟದೆನಿಸಿತೆ ಯಾರಿಗೆ ಗೊತ್ತು. ಆದರೆ ಝೂರಿಯಾನ ಮೈದುನ ಗಯಾನಿಗೆ ಈ ಎತ್ತುಗಳನ್ನು ಹೊಡೆದುಕೊಂಡು ಹೋಗಲು ಸಾಕುಸಾಕಾಯಿತು. ಹಿಂದಿನಿಂದ ತಿವಿದರೆ ಅವು ಎಡಕ್ಕೆ-ಬಲಕ್ಕೆ ಓಡುತ್ತಿದ್ದವು; ಮೂಗುದಾರ ಹಿಡಿದು ಮುಂದಕ್ಕೆ ಎಳೆದರೆ ಹಿಂದು-ಹಿಂದಕ್ಕೆ ಹೋಗುತ್ತಿದ್ದವು; ಹೊಡೆದರೆ ಕೊಂಬುಗಳನ್ನು ಕೆಳಗೆ ಮಾಡಿ ಹೂಂಕರಿಸುತ್ತಿದ್ದವು. ಒಂದು ವೇಳೆ ದೇವರು ಅವುಗಳಿಗೆ ಮಾತು ಕೊಟ್ಟಿದ್ದರೆ ಅವು ಝೂರಿಯನ್ನು, "ನೀನು ಬಡಪಾಯಿಗಳಾದ ನಮ್ಮನ್ನು ಏಕೆ ಹೊರಗೆ ಅಟ್ಟುತ್ತಿದ್ದೀಯೇ? ನಾವು ನಿನ್ನ ಸೇವೆ ಮಾಡುವಾಗ ಎಳ್ಳಷ್ಟೂ ಸಂಕೋಚಪಟ್ಟಿಲ್ಲ. ನಮ್ಮ ಇಷ್ಟು ಶ್ರಮ ನಿನಗೆ ಸಾಕಾಗಿದ್ದಿಲ್ಲವಾದರೆ, ಇನ್ನೂ ಹೆಚ್ಚು ಕೆಲಸವನ್ನು ತೆಗೆದುಕೊಳ್ಳಬಹುದಾಗಿತ್ತು. ನಿನ್ನ ಚಾಕರಿಯಲ್ಲಿಯೇ ಸಾಯಲು ನಮಗೆ ಒಪ್ಪಿಗೆ ಇತ್ತು. ನಾವು ಎಂದೂ ಮೇವು ಬಗ್ಗೆ ತಕರಾರು ಮಾಡಲಿಲ್ಲ ನೀನು ತಿನ್ನಲು ಏನು ಹಾಕಿದೆಯೋ ಅದನ್ನು ತಲೆಬಗ್ಗಿಸಿ ತಿಂದೆವು. ಅಂದ ಮೇಲೆ ನೀನು ಈ ದುಷ್ಟನ ಕೈಗೆ ಏಕೆ ನೂಕಿದೆ?" ಎಂದು ಕೇಳುತ್ತಿದ್ದವು.

ಸಂಜೆಯ ಹೊತ್ತಿಗೆ ಎರಡೂ ಎತ್ತುಗಳು ತಮ್ಮ ಹೊಸ ಸ್ಥಳ ತಲುಪಿದವು. ಇಡೀ ದಿನ ಹಸಿದಿದ್ದವು. ಆದರೆ ಗೊಂತ ಬಳಿ ಕಟ್ಟಿದ ಮೇಲೆ ಒಂದೂ ಅದರಲ್ಲಿ ಬಾಯಿ ಹಾಕಲಿಲ್ಲ. ಮನಸ್ಸಿಗೆ ಬಹಳ ನೋವಾಗುತ್ತಿತ್ತು. ಯಾವುದನ್ನು ತಮ್ಮ ಮನೆಯೆಂದೇ ತಿಳಿದಿದ್ದವೋ ಅದು ಇಂದು ಅವುಗಳಿಂದ ತಪ್ಪಿಹೋಗಿತ್ತು. ಹೊಸ ಮನೆ, ಹೊಸ ಊರು, ಹೊಸ ಮನುಷ್ಯ. ಎಲ್ಲ ಅವುಗಳಿಗೆ ವಿಚಿತ್ರವಾಗಿ ಕಾಣಿಸುತ್ತಿದ್ದವು. ಎರಡೂ ಮೂಕಭಾಷೆಯಲ್ಲಿ ಮಾತ ಕೊಟ್ಟವು, ಎರಡೂ ಓರೆಗಣ್ಣುಗಳಲ್ಲಿ ನೋಡಿದವು ಮತ್ತು ಮಲಗಿದವು. ಊರೆಲ್ಲ ಮಲಗಿದ ಮೇಲೆ ಅವೆರಡೂ ಜೋರಾಗಿ ತಮ್ಮ ಕತ್ತನ್ನು ಎಳೆದು ಕತ್ತಿನ ಹಗ್ಗವನ್ನು ಹರಿದುಹಾಕಿದವು ಮತ್ತು ಮನೆ ಕಡೆ ನಡೆದವು. ಕತ್ತಿನ ಹಗ್ಗ ಬಹಳ ಗಟ್ಟಿಯಾಗಿದ್ದವು. ಆದರೆ ಈ ಎರಡೂ ಎತ್ತುಗಳಿಗೆ ಎರಡುಪಟ್ಟು ಶಕ್ತಿ ಬಂತು. ಒಂದೇ ಒಂದು ಎಳೆತಕ್ಕೆ ಹಗ್ಗಗಳು ಹರಿದುಹೋದವು. ಸದ್ದಿಗೆ ಹುಡುಗಿ ಎದ್ದಳು. ತಾತ ಕೊಟ್ಟಿರುವ ಎರಡೂ ಎತ್ತುಗಳೂ ಓಡಿಹೋಗುತ್ತಿವೆ. "ಅಪ್ಪಾ! ಅಪ್ಪಾ! ಎರಡೂ ಎತ್ತು ಓಡಿ ಹೋಗುತ್ತಿವೆ. ಬೇಗ ಓಡು" ಎಂದು ಕೂಗಿದಳು. ಗಯಾ ಗಡಿಬಿಡಿಯಿಂದ ಹೊರಗೆ ಬಂದ ಮತ್ತು ಎತ್ತುಗಳನ್ನು ಹಿಡಿ

ಯಲು ಹೊರಟ. ಅವೆರಡೂ ಓಡಿದವು. ಗಯಾ ಅವುಗಳ ಬೆನ್ನು ಹತ್ತಿದ. ಅವು ಇನ್ನೂ ವೇಗವಾಗಿ ಓಡಿದವು. ಗಯಾ ಗಟ್ಟಿಯಾಗಿ ಕೂಗಾಡಿದ. ಹಳ್ಳಿಯಿಂದ ಇನ್ನಷ್ಟು ಜನರನ್ನು ಕರೆತರಲು ವಾಪಸು ಓಡುತ್ತಾ ಬಂದ. ಆಗ ಈ ಎರಡು ಎತ್ತುಗಳಿಗೆ ಓಡಿಹೋಗಲು ಅವಕಾಶ ಸಿಕ್ಕಿತು. ಹೊರಟವು, ಅವುಗಳಿಗೆ ದಾರಿಯ ಜ್ಞಾನವೂ ತಪ್ಪಿಹೋಯಿತು. ಯಾವ ಪರಿಚಿತ ಹಾದಿಯಲ್ಲಿ ಬಂದಿದ್ದವೋ ಆ ದಾರಿ ಇದಾಗಿರಲಿಲ್ಲ. ಹೊಸ ಹೊಸ ಹಳ್ಳಿಗಳು ಸಿಗಲಾರಂಭಿಸಿದವು. ಆಗ ಒಂದು ಹೊಲದ ತುದಿಯಲ್ಲಿ ನಿಂತು "ಈಗೇನು ಮಾಡೋಣ" ಎಂದು ಆಲೋಚಿಸಹತ್ತಿದವು.

ವಜ್ರ ಎಂಬ ಎತ್ತು ಅಂದಿತು, "ನಾವು ದಾರಿ ತಪ್ಪಿರುವಂತಿದೆ." ಎರಡೂ ಬಹಳ ಹಸಿವಿನಿಂದ ಬಳಲುತ್ತಿದವು. ಎದುರಿನಲ್ಲಿ ಬಟಾಣಿ ಹೊಲವಿತ್ತು. ಮುತ್ತು ಎಂಬ ಎತ್ತು ಆ ಹೊಲದಲ್ಲಿ ನುಗ್ಗಿತು. ವಜ್ರ ಎತ್ತು ಬೇಡವೆಂದು ಹೇಳುತ್ತಲೇ ಇತ್ತು. ಆದರೆ ಮುತ್ತು ಎತ್ತು ಆ ಮಾತನ್ನು ಕೇಳಲೇ ಇಲ್ಲ. ಒಂದು ಸ್ವಲ್ಪ ತಿಂದಿತ್ತೋ ಇಲ್ಲವೊ ಅಷ್ಟರಲ್ಲಿ ಇಬ್ಬರು ಮನುಷ್ಯರು ಲಾಠಿ ತೆಗೆದುಕೊಂಡು ಓಡಿ ಬಂದರು, ಮತ್ತು ಎರಡೂ ಗೆಳೆಯರನ್ನು ಅಡ್ಡಗಟ್ಟಿದರು. ವಜ್ರ ಎತ್ತು ತೆವರಿ ಮೇಲೆ ನಿಂತಿತ್ತು. ಅದು ಹೊರಟುಹೋಯಿತು. ಮುತ್ತು ಎತ್ತು ನೀರಾವರಿಯಾದ ಹೊಲದಲ್ಲಿತ್ತು. ಅದರ ಗೊರಸುಗಳು ಕೆಸರಿನಲ್ಲಿ ಹೂತುಕೊಳ್ಳಲು ಪ್ರಾರಂಭಿಸಿದವು. ಓಡಿಹೋಗಲು ಸಾಧ್ಯವಾಗಲಿಲ್ಲ. ಅದು ಅವರ ಕೈಗೆ ಸಿಕ್ಕಿಕೊಂಡಿತು. ವಜ್ರ ಎತ್ತು ತನ್ನ ಜೊತೆಗಾರ ಸಂಕಟದಲ್ಲಿರುವುದನ್ನು ನೋಡಿತು, ಹಿಂದಿರುಗಿ ಬಂದಿತು. ಸಿಕ್ಕಿಹಾಕಿಕೊಳ್ಳುವುದಾದರೆ ಇಬ್ಬರೂ ಸಿಕ್ಕಿಹಾಕಿಕೊಳ್ಳೋಣ ಎಂದು ಅಂದುಕೊಂಡಿತು. ಆ ಮನುಷ್ಯರು ಎರಡೂ ಎತ್ತುಗಳನ್ನು ಹಿಡಿದುಬಿಟ್ಟರು. ಬೆಳಿಗ್ಗೆ ಅವೆರಡನ್ನೂ ದೊಡ್ಡಿಯಲ್ಲಿ ಕೂಡುಹಾಕಿದರು. ಆ ಇಬ್ಬರೂ ಗೆಳೆಯರ ಜೀವನದಲ್ಲಿ ಇದೇ ಮೊದಲ ಬಾರಿಗೆ ಇಂಥ ಪರಿಸ್ಥಿತಿ ಉಂಟಾಗಿತ್ತು. ಇಡೀ ದಿನ ಕಳೆಯಿತು. ತಿನ್ನಲು ಒಂದು ಹುಲ್ಲುಕಡ್ಡಿಯೂ ಸಿಗಲಿಲ್ಲ. ಈ ಯಜಮಾನ ಎಂಥವನೆಂದೇ ಗೊತ್ತಾಗಲಿಲ್ಲ. ಅಲ್ಲಿ ಕೆಲವು ಎಮ್ಮೆ, ಕುರಿ, ಕುದುರೆ ಮತ್ತು ಕತ್ತೆಗಳಿದ್ದವು. ಯಾರ ಎದುರಿನಲ್ಲೂ ಮೇವು ಇರಲಿಲ್ಲ. ಎಲ್ಲವೂ ನೆಲದ ಮೇಲೆ ಹೆಣಗಳಂತೆ ಬಿದ್ದಿದ್ದವು. ಕೆಲವು ಎದ್ದು ನಿಲ್ಲಲಾರದಷ್ಟು ನಿಃಶಕ್ತವಾಗಿದ್ದವು.

ಈ ಇಬ್ಬರು ಗೆಳೆಯರು ಬಾಗಿಲಕಡೆಗೆ ನೆಟ್ಟದೃಷ್ಟಿಯಿಂದ ನೋಡುತ್ತಿದ್ದವು. ಆದರೆ ಯಾರೂ ಮೇವು ತೆಗೆದುಕೊಂಡು ಬರುತ್ತಿರುವುದು ಕಾಣಿಸಲಿಲ್ಲ. ಆಗ ಅವು ಗೋಡೆಯ ಉಪ್ಪುಮಣ್ಣನ್ನು ನೆಕ್ಕಲು ಪ್ರಾರಂಭಿಸಿದವು. ಆದರೆ

ಆದರಿಂದ ಯಾವ ತೃಪ್ತಿ ಸಿಗುವುದು?

ರಾತ್ರಿಯೂ ಊಟ ಸಿಗದೇ ಹೋದಮೇಲೆ ವಜ್ರ ಎತ್ತಿನ ಮನಸ್ಸಿನಲ್ಲಿ ಹೋರಾಟದ ಉರಿ ಎದ್ದಿತು, ಈ ಮಾತನ್ನು ಮುತ್ತು ಎತ್ತಿಗೂ ಹೇಳಿತು. ಈ ರೀತಿ ಎರಡೂ ಮಾತನಾಡಿಕೊಂಡವು. ಹೋರಾಟ ನಡೆಸಲು ಸಿದ್ಧವಾದವು. ವಜ್ರ ಎತ್ತು ಬಹಳ ದಷ್ಟಪುಷ್ಟವಾಗಿಯೇ ಇತ್ತು. ದೊಡ್ಡಿಯ ಗೋಡೆ ಗಟ್ಟಿಯಾಗಿ ಇರಲಿಲ್ಲ ವಜ್ರ ಎತ್ತು ತನ್ನ ಮೊನಚಾದ ಕೊಂಬುಗಳಿಂದ ಗೋಡೆಯನ್ನು ಬೀಳಿಸಲು ಪ್ರಾರಂಭಿಸಿತು. ಎತ್ತಿನ ಉತ್ಸಾಹ ಇನ್ನೂ ಹೆಚ್ಚಿತು. ಓಡಿಓಡಿ ಬಂದು ತಿವಿದು ಗೋಡೆಯನ್ನು ಉರುಳಿಸಲು ಪ್ರಾರಂಭಿಸಿತು. ಆ ಹೊತ್ತಿಗೆ ದೊಡ್ಡಿಯ ಯಜಮಾನ ಲಾಟೀನು ಹಿಡಿದು ದೊಡ್ಡಿಗಳಲ್ಲಿರುವ ಪ್ರಾಣಿಗಳ ಹಾಜರಿ ತೆಗೆದುಕೊಳ್ಳಲು ಬಂದ. ಅವನು ಈ ವಜ್ರ ಎತ್ತು ಮಾಡಿರುವ ಉದ್ಧಟತನವನ್ನು ನೋಡಿ ಬಹಳ ಕೋಪಗೊಂಡ ಮತ್ತು ಅದಕ್ಕೆ ಕೋಲಿನಿಂದ ಅನೇಕ ಬಾರಿ ಹೊಡೆದು ಇನ್ನೂ ಹೆಚ್ಚು ಗಟ್ಟಿಯಾದ ಹಗ್ಗದಿಂದ ಕಟ್ಟಿದ. ಇದನ್ನೆಲ್ಲ ಮುತ್ತು ಎತ್ತು ನೋಡಿ ವಜ್ರ ಎತ್ತಿಗೆ ಇಂಥ ಪ್ರಯತ್ನ ವೆಲ್ಲ ವ್ಯರ್ಥ ಎಂದು ಹೇಳಿತು. ವಜ್ರ ಎತ್ತು ಸಾಯುವುದೇ ಹಣೆಬರಹ ಇರುವಾಗ ಸ್ವತಂತ್ರವಾಗಲು ಪ್ರಯತ್ನಿಸುವುದೂ ಮತ್ತು ಜೊತೆ ಇರುವ ಇತರ ಪ್ರಾಣಿಗಳಿಗೂ ಸ್ವಾತಂತ್ರ್ಯ ತಂದುಕೊಡುವುದೂ ಶ್ರೇಯಸ್ಕರ ಎಂದು ಹೇಳಿತು. ಈ ಮಾತನ್ನು ಮುತ್ತು ಎತ್ತು ಒಪ್ಪಿಕೊಂಡಿತು ಮತ್ತು ಅದೂ ಸಹ ಗೋಡೆಯನ್ನು ಉರುಳಿಸುವ ಕೆಲಸದಲ್ಲಿ ತೊಡಗಿತು. ಅನೇಕ ಪ್ರಯತ್ನಗಳ ನಂತರ ಗೋಡೆ ಬಹಳಷ್ಟು ಬಿದ್ದುಹೋಯಿತು. ಆಗ ದೊಡ್ಡಿಯಲ್ಲಿದ್ದ ಉಳಿದ ಎಲ್ಲ ಪ್ರಾಣಿಗಳು ಎದ್ದುನಿಂತವು. ಅಲ್ಲಿದ್ದ ಕುದುರೆಗಳು ಒಮ್ಮೆಲೆ ಓಡಿ ಹೋದವು: ಕುರಿಗಳೂ ಹೋದವು; ಎಮ್ಮೆಗಳೂ ಹೋದವು. ಕತ್ತೆಗಳು ಮಾತ್ರ ಓಡಿಹೋಗಲಿಲ್ಲ. ವಜ್ರ ಎತ್ತು ಆ ಕತ್ತೆಗಳನ್ನು ಏಕೆ ಓಡಿಹೋಗಲಿಲ್ಲವೆಂದು ಕೇಳಿತು. ಅದಕ್ಕೆ ಕತ್ತೆಗಳು ಪುನಃ ಸಿಕ್ಕಿಹಾಕಿಕೊಳ್ಳುವ ಭೀತಿ ಮತ್ತು ಬಹಳ ಏಟು ತಿನ್ನುವ ಭಯ ತಮಗೆ ಇರುವುದರಿಂದ ಓಡಿ ಹೋಗುವುದಿಲ್ಲವೆಂದು ಹೇಳಿದವು. ಅರ್ಧರಾತ್ರಿಯಾಗಿತ್ತು. ಮುತ್ತು ಎತ್ತು ತನ್ನ ಗೆಳೆಯ ವಜ್ರ ಎತ್ತಿನ ಹಗ್ಗವನ್ನು ಕತ್ತರಿಸಿಹಾಕಲು ಪ್ರಯತ್ನಿಸಿ ವಿಫಲವಾಯಿತು. ಆಗ ವಜ್ರ ಎತ್ತು ಹೇಳಿತು," ನೀನು ಹೊರಟುಹೋಗು. ನಾನು 'ಇಲ್ಲಿಯೇ ಬಿದ್ದುಕೊಂಡಿರುತ್ತೇನೆ. ಮುಂದೆ ಎಂದಾದರೂ ಭೇಟಿಯಾಗೋಣ. ಆಗ ಮುತ್ತು ಎತ್ತು ಕಣ್ಣಲ್ಲಿ ನೀರು ತಂದುಕೊಂಡು ಅಂದಿತು, "ನೀನು ನನ್ನನ್ನು ಇಷ್ಟು ಸ್ವಾರ್ಥಿಯೆಂದು ತಿಳಿದಿದ್ದೀಯೋ? ನೀನು ಮತ್ತು ನಾನು ಇಷ್ಟು ದಿನ ಒಟ್ಟಿಗೆ ಇದ್ದೆವು. ಇಂದು ನೀನು

ಕಷ್ಟಕ್ಕೆ ಸಿಕ್ಕಿರುವಾಗ ನಾನು ನಿನ್ನನ್ನು ಬಿಟ್ಟು ಹೋಗುವುದು ತರವೆ? ಯಾವ ಅಪರಾಧಕ್ಕಾಗಿ ನಿನ್ನ ಕುತ್ತಿಗೆಗೆ ಬಂಧನ ಉಂಟಾಯಿತೋ ಅದಕ್ಕಾಗಿ ನನಗೆ ಏಟು ಬಿದ್ದರೆ ಚಿಂತೆ ಏಕೆ? ಒಂಭತ್ತು-ಹತ್ತು ಪ್ರಾಣಿಗಳ ಪ್ರಾಣವಂತೂ ಉಳಿಯಿತಲ್ಲ? ಅವುಗಳ ಆಶೀರ್ವಾದವಂತೂ ಇದ್ದೇ ಇದೆ." ಹೀಗೆ ಹೇಳಿ ಮುತ್ತು ಎತ್ತು ಆ ಎರಡೂ ಕತ್ತೆಗಳನ್ನು ಕೊಂಬಿನಿಂದ ತಿವಿದು-ತಿವಿದು ಹೊರಗೆ ಓಡಿಸಿತು ಮತ್ತು ತನ್ನ ಗೆಳೆಯನ ಬಳಿ ಬಂದು ಮಲಗಿಕೊಂಡಿತು.

ಮಾರನೇ ದಿನ ಬೆಳಿಗ್ಗೆ ದೊಡ್ಡಿಯ ಗುಮಾಸ್ತ ಮತ್ತು ಕಾವಲುಗಾರ ಹಾಗೂ ಇತರರು ಎಂಥ ಗಲಾಟೆ ಮಾಡಿದರು ಎಂಬುದನ್ನ ಹೇಳುವ ಅಗತ್ಯ ವಿಲ್ಲ. ಅವುಗಳಿಗೆ ಭಾರಿ ಏಟುಗಳು ಬಿದ್ದುವು ಮತ್ತು ಇನ್ನೊಂದು ಎತ್ತನ್ನೂ ದಪ್ಪ ಹಗ್ಗದಿಂದ ಕಟ್ಟಿಹಾಕಿದರು.

ಒಂದು ವಾರದ ವರೆಗೆ ಆ ಎರಡು ಎತ್ತುಗಳನ್ನು ಕಟ್ಟಿಹಾಕಲಾಗಿತ್ತು. ಒಬ್ಬರೂ ಒಂದು ಕಾಳು ಮೇವನ್ನೂ ಹಾಕಲಿಲ್ಲ. ಯಾವಾಗಲೋ ಒಮ್ಮೆ ನೀರು ಕುಡಿಸ ಲಾಯಿತು. ಅದೇ ಅವುಗಳಿಗೆ ಆಧಾರವಾಗಿತ್ತು. ಮೇಲೆ ಏಳಲಾರದಷ್ಟು ಎರಡೂ ದುರ್ಬಲವಾಗಿದ್ದವು. ಮೂಳೆಗಳು ಕಾಣುತ್ತಿದ್ದವು.

ಒಂದು ದಿನ ದೊಡ್ಡಿಯ ಮುಂದೆ ತಮಟೆ ಬಾರಿಸಹತ್ತಿತು. ಮಧ್ಯಾಹ್ನ ಆಗುತ್ತಲೇ ಅಲ್ಲಿ ಐವತ್ತು-ಅರವತ್ತು ಜನ ಸೇರಿದರು. ಈ ಎರಡು ಎತ್ತುಗಳನ್ನೂ ಹೊರಗೆ ತಂದರು. ಅವುಗಳ ಪರೀಕ್ಷೆ ನಡೆಯಲು ಶುರುವಾಯಿತು. ಜನ ಇವು ಗಳನ್ನು ನೋಡಿ ಮನಸ್ಸನ್ನು ಚಿಕ್ಕದಾಗಿ ಮಾಡಿಕೊಂಡು ಹೋಗುತ್ತಿದ್ದರು. ಸಾಯುವ ಸ್ಥಿತಿಯಲ್ಲಿರುವ ಎತ್ತುಗಳನ್ನು ಯಾರು ತಾನೆ ಖರೀದಿಸುವರು ? ಆದರೆ ಒಬ್ಬ ದಢಿಯ ಬಂದ; ಅವನ ಕಣ್ಣುಗಳು ಕೆಂಪಗಿದ್ದವು ಮತ್ತು ಮುಖಮುದ್ರೆ ಅತ್ಯಂತ ಕಠೋರವಾಗಿತ್ತು. ಅವನ ಮುಖವನ್ನು ನೋಡಿದ ಮೇಲೆ ಅಂತರಜ್ಞಾನದಿಂದ ಆ ಎರಡು ಎತ್ತುಗಳ ಎದೆ ನಡುಗಲು ಪ್ರಾರಂಭಿ ಸಿತು. ಎರಡೂ ಒಂದನೊಂದು ಭಯದ ದೃಷ್ಟಿಯಿಂದ ನೋಡಿ ತಲೆ ತಗ್ಗಿಸಿದವು. ಹರಾಜು ಆದನಂತರ ಎರಡೂ ಎತ್ತುಗಳು ಆ ದಢಿಯನ ಜೊತೆ ಹೊರಟವು. ಅವುಗಳ ಮೈ ನಡುಗುತಿತ್ತು, ಕಾಲನ್ನು ಎತ್ತಿ ಇಡಲು ಸಾಧ್ಯವಾಗುತ್ತಿರಲಿಲ್ಲ. ಭಯದ ಕಾರಣದಿಂದ ಏಳುತ್ತ ಬೀಳುತ ಓಡುತ್ತಿದ್ದವು. ಏಕೆಂದರೆ ಅವು ಸ್ವಲ್ಪ ನಿಧಾನವಾಗಿ ನಡೆದರೂ ಜೋರಾಗಿ ಹೊಡೆಯುತ್ತಿದ್ದರು. ದಾರಿಯಲ್ಲಿ ದನಗಳ ಒಂದು ಗುಂಪು ಹಸಿರಾಗಿರುವಂಥ ಒಂದು ಹೊಲದಲ್ಲಿ ಮೇಯುತ್ತಿದ್ದವು. ಅವೆ ಲ್ಲವೂ ಖುಷಿಯಾಗಿದ್ದವು, ಮಿಂಚುತ್ತಿದ್ದವು, ಚಟುವಟಿಕೆಯಿಂದ ಕೂಡಿದ್ದವು. ನೆಗೆಯುತ್ತಿದ್ದವು, ಅವುಗಳನ್ನು ನೋಡಿ ಈ ಎತ್ತುಗಳಿಗೆ ತಮ್ಮ ಸ್ಥಿತಿಯ ಬಗ್ಗೆ

ಬಹಳ ಖೇದವೆನಿಸಿತು. ತಾವು ಹೋಗುತ್ತಿರುವ ದಾರಿ ಪರಿಚಿತವಿರುವಂತೆ ಅವುಗಳಿಗನಿಸಿತು ಈ ದಾರಿ ಮೂಲಕವೇ ಗಯಾ ತಮ್ಮನ್ನು ಕರೆದುಕೊಂಡುಹೋದುದೆಂದು ಅವುಗಳಿಗೆ ಅನಿಸಿತು.

ಅದೇ ಹೊಲ, ಅದೇ ತೋಟ, ಅದೇ ಹಳ್ಳಿ, ಸಿಗಲು ಪ್ರಾರಂಭಿಸಿದವು. ಎತ್ತುಗಳ ಕಣ್ಣಿನಿಂದ ಆನಂದದ ಬಾಷ್ಪಗಳು ಹರಿಯಲು ಪ್ರಾರಂಭಿಸಿದವು. ಪ್ರತಿಕ್ಷಣವೂ ಅವುಗಳ ಹೆಜ್ಜೆ ವೇಗವಾಗಲು ಪ್ರಾರಂಭಿಸಿತು. ಎಲ್ಲ ದಣಿವು, ಎಲ್ಲ ನಿಃಶಕ್ತಿ ಮಾಯವಾಯಿತು. ಅವುಗಳಿಗೆ ತಾವು ಮೊದಲಿದ್ದ ಯಜಮಾನನ ಮನೆಯ ಹತ್ತಿರವೇ ಹೋಗುತ್ತಿದ್ದೇವೆಂದು ಗೊತ್ತಾಯಿತು. ಕೂಡಲೇ ಅವು ಉನ್ಮತ್ತವಾಗಿ ಆ ಮನೆ ಕಡೆ ಓಡಿದವು ಮತ್ತು ಮನೆಯ ಮುಂದೆ ಬಂದು ನಿಂತವು. ಅಗಳ ಹಿಂದೆ ಆ ದಢೀಯನು ಬಂದ ಆಗ ಝೂರಿ ಮನೆಯ ಮುಂದೆ ಬಿಸಿಲು ಕಾಯಿಸುತ್ತ ಕೂತಿದ್ದ. ಎತ್ತುಗಳನ್ನು ನೋಡಿದ ತಕ್ಷಣವೇ ಓಡಿ ಬಂದ ಮತ್ತು ಅವುಗಳನ್ನು ಅಪ್ಪಿಕೊಳ್ಳಲು ಪ್ರಾರಂಭಿಸಿದ. ಎತ್ತುಗಳ ಕಣ್ಣಿನಿಂದ ಆನಂದದ ಬಾಷ್ಪಗಳು ಹರಿಯಲು ಪ್ರಾರಂಭಿಸಿದವು. ದಢೀಯನು ಬಂದು ಹಗ್ಗವನ್ನು ಹಿಡಿದುಕೊಂಡ. ಆಗ ಝೂರಿ ಅಂದ "ಇವು ನನ್ನ ಎತ್ತುಗಳು."

"ಅದು ಹೇಗೆ? ನಾನು ದೊಡ್ಡಿಯಿಂದ ಹರಾಜಿನಲ್ಲಿ ಖರೀದಿಸಿದ್ದೇನೆ" ಎಂದು ಆ ದಢೀಯಾ ಅಂದ.

ಅವರಿಬ್ಬರಲ್ಲಿ ಮಾತಿನ ಚಕಮಕಿ ಆರಂಭವಾಯಿತು.

"ನೀನು ಈ ಎತ್ತುಗಳನ್ನು ಕದ್ದು ತಂದಿದ್ದೀಯೆ, ಸುಮ್ಮನೆ ಹೊರಟು ಹೋಗು. ಇವು ನನ್ನ ಎತ್ತುಗಳೇ ಆಗಿವೆ. ನನ್ನ ಎತ್ತುಗಳನ್ನು ಹರಾಜು ಹಾಕುವ ಅಧಿಕಾರ ಯಾರಿಗೂ ಇಲ್ಲ. ಈ ಎತ್ತುಗಳು ನನ್ನ ಮನೆಯ ಮುಂದೆ ಬಂದು ನಿಂತಿರುವುದೇ ಇದಕ್ಕೆ ಸಾಕ್ಷ" ಎಂದು ಝೂರಿಕಾಚ್ಚಿ ವಾದಿಸಿದ. ಆದರೆ ದಢೀಯನು ಎತ್ತುಗಳನ್ನು ಬಲವಂತವಾಗಿ ಹಿಡಿಯಲು ಮುಂದೆ ಬಂದ. ಅದೇ ಹೊತ್ತಿಗೆ ಮುತ್ತು ಎತ್ತು ಅವನ ಬೆನ್ನು ಹತ್ತಿತು. ಅವನು ಕೆಟ್ಟ ಮಾತುಗಳನ್ನು ಆಡುತ್ತ ಓಡಿ ಹೋದ. ನಂತರ ಮುತ್ತು ಎತ್ತು ಧೈರ್ಯವಾಗಿ ಹಿಂದಿರುಗಿತು. ★

("ಶಾಂತಿಸೇವಕ" ಸಾಭಾರ : ಅನು : ಸು.ಕೌ.)

 8 ನೇ ಪುಟದಿಂದ

ಅ) ನೀರಾ ಪಾನೀಯ : ಸೂರ್ಯೋದಯದಲ್ಲಿ ನೀರಾ ಪಾನೀಯ ಅಮೃತಕ್ಕೆ ಸಮವಾದದ್ದು. ಸೂರ್ಯ ಬೆಳೆದಂತೆ ಇದರಲ್ಲಿ ದಂಡಾಣು (ಬ್ಯಾಕ್ಟೀರಿಯಾ) ಗಳು ವೃದ್ಧಿಗೊಂಡು ಇದು ಹಾಳಾಗುತ್ತದೆ. ಈ ಹಾಳಾಗುವಿಕೆಯನ್ನು ಇಂದಿನ ವೈಜ್ಞಾನಿಕ ಯುಗದಲ್ಲಿ ತಡೆಗಟ್ಟಲು ಸುಲಭೋಪಾಯಗಳಿವೆ.

ಆ) ನೀರಾ ಶೀತಲೀಕರಣ : ೬ ಎಂ. ಎಂ. ವ್ಯಾಸದ ನೂರು ಅಡಿ ಉದ್ದವುಳ್ಳ ಸುರುಳಿ ಸುತ್ತಿದ ಮಂಜುಗೆಡ್ಡೆಯಿಂದ ಆವರಿಸಲ್ಪಟ್ಟ ಕೊಳವೆ ಮಾರ್ಗದಲ್ಲಿ ಒಂದು ಮುಖದಿಂದ ಹಾಯಿಸಿ ಇನ್ನೊಂದು ಮುಖದಿಂದ ಹೊರಬರುವ ನೀರಾವನ್ನು ಶುಚಿಯಾದ ಬಾಟಲಿಗಳಲ್ಲಿ ತುಂಬಿ, ಭದ್ರವಾಗಿ ಮುಚ್ಚಳವನ್ನು ಮುಚ್ಚಿದ ಬಾಟಲಿಗಳು ಮೂವತ್ತು ಘಂಟೆಯವರೆಗೆ ಹಾಳಾಗದಂತೆ ಸಂರಕ್ಷಿಸುವುದರಿಂದ ದೂರದ ಮಾರಾಟ ಕೇಂದ್ರಗಳಲ್ಲಿ ಮಾರಬಹುದು ಹಾಗೂ ಮಾರಾಟ ಕೇಂದ್ರಗಳಲ್ಲಿ ರೆಫ್ರಿಜಿರೇಟರ್‌ಗಳ ವ್ಯವಸ್ಥೆ ಮಾಡಿಕೊಂಡು ಬಾಟಲಿಗಳನ್ನು ಅದರಲ್ಲಿ ಶೇಖರಿಸುವ ಮೂಲಕ ಮೂರು ದಿನಗಳವರೆಗೆ ಮಾರಾಟ ಮಾಡಬಹುದು. ನೂತನ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಳ್ಳುವ ಮೂಲಕ ೩ ತಿಂಗಳಿಗೂ ಹೆಚ್ಚಿಗೆ ಶೇಖರಿಸಿಡಬಹುದಾಗಿದೆ.

ಇ) ಬೆಲ್ಲ ತಯಾರಿಕೆ : ನೇರ ಮಾರಾಟಕ್ಕಿಂತ ಹೆಚ್ಚಾಗಿ ಉತ್ಪಾದನೆಯಾದ ನೀರಾದಿಂದ ಬೆಲ್ಲ ತಯಾರಿಸಬಹುದಾಗಿದೆ. ೪X೬X೧ ಅಡಿ ಎತ್ತರದ ಚೌಕಾಕಾರದ ಚಿಕ್ಕ ಕೊಪ್ಪರಿಗೆಯನ್ನು ತಯಾರಿಸಿ ಅದಕ್ಕನುಗುಣವಾಗಿ ಹೊಗೆ ರಹಿತ ಅಸ್ತ್ರ ಒಲೆಯನ್ನು ನಿರ್ಮಿಸಿಕೊಂಡು ತಮ್ಮ ಮನೆಯಲ್ಲೇ ಉದ್ದಿಮೆ ಸಂಸ್ಥಾಪಿಸಿಕೊಳ್ಳಬಹುದಾಗಿದೆ.

ಈ) ಕಲ್ಲು ಸಕ್ಕರೆ : ಈ ಚಿಕ್ಕ ಕೊಪ್ಪರಿಕೆಯಲ್ಲಿಯೇ ನೀರಾವನ್ನು ಕುದಿಸಿ ಪಾಕಮಾಡಿ ಒಂದು ಹಂತಕ್ಕೆ ಅದು ಗಟ್ಟಿಗೊಂಡ ನಂತರ (ಇದನ್ನು ಪತ್ತೆ ಹಚ್ಚಲು ಬ್ರಿಕ್ಸೋಮೀಟರ್ ಸಹ ಬಳಸಬಹುದು) ಅದನ್ನು ಹೊಸ ಮಡಿಕೆಗಳಲ್ಲಿ ಸ್ವಲ್ಪ ದಾರದ ಎಳೆಗಳನ್ನು ಬಿಟ್ಟು ಅದರ ಮೇಲೆಯೇ ಪಾಕವನ್ನು ಹಾಕಿ, ಮುಚ್ಚಳಮುಚ್ಚಿ ಹಬೆ ಹೊರಹೋಗದಂತೆ ಮಣ್ಣನ್ನು ಮೆತ್ತಿ ಸೀಲ್ ಮಾಡುವ ಮೂಲಕ ಕಲ್ಲುಸಕ್ಕರೆ ತಯಾರಿಸಬಹುದಾಗಿದೆ.

ಉ) ಸಕ್ಕರೆ ತಯಾರಿಕೆ : ನೀರಾದಿಂದ ಸಕ್ಕರೆ ತಯಾರಿಸಲು ನಿರ್ದಿಷ್ಟವಾದ ಯಂತ್ರೋಪಕರಣಗಳಿವೆ. ದಿನವೊಂದಕ್ಕೆ ೧ ಟನ್ ಸಕ್ಕರೆ ಉತ್ಪಾದನೆ ಮಾಡಬಹುದಾಗಿದೆ. ಈ ಘಟಕವು ಸುತ್ತಲಿನ ಹತ್ತಾರು ಗ್ರಾಮದ ರೈತರಿಗೆ ಇದೊಂದು ಆಶಾಕಿರಣವಾಗಬಹುದಾಗಿದೆ. ★

ಭಾರತಮಾತೆಯ ಬೆನ್ನಲ್ಲಿ ಚೂರಿ

ಸಂಗ್ರಹ : ನೀಲತ್ತಳ್ಳಿ ಕಸ್ತೂರಿ —ಮನಮೋಹನ್ ಚೌಧರಿ

ನಾವು ಚಿಕ್ಕವರಾಗಿದ್ದಾಗ ಒಂದು ಲಾವಣಿ ಕೇಳುತ್ತಿದ್ದೆವು. ಟಿಪ್ಪುಸುಲ್ತಾನನ ಲಾವಣಿ. ಅದರಲ್ಲಿ "ಮಸಲತ್ ಮಾಡಿದ ಮೀರ್‌ಸಾದಕನಿಗೆ ದೇಶದ್ರೋಹಿ ಎಂದ್ಹೆಸರಾಯ್ತು" ಎಂಬ ಸಾಲು ಇತ್ತು. ಬ್ರಿಟಿಷ್‌ರೊಡನೆ ಒಳಸಂಚು ಮಾಡಿಕೊಂಡು ಟಿಪ್ಪುವಿಗೆ ದ್ರೋಹ ಮಾಡಿದ್ದ ಮೀರ್‌ಸಾದಕ್. ಹಾಗೆಯೇ ಸಿರಾಜುದ್ದೌಲನಿಗೆ ದ್ರೋಹ ಮಾಡಿದವನು ಮೀರ್‌ಜಾಫರ್. ದೊರೆ ಜಯಚಂದ್ರ ಅಳಿಯ ಪೃಥ್ವಿರಾಜನ ಮೇಲೆ ಹಗೆ ತೀರಿಸಿಕೊಳ್ಳಲು ಮಹಮ್ಮದ್ ಘೋರಿಯೊಂದಿಗೆ ಒಳಸಂಚು ಮಾಡಿದ. ಈ ಕಥೆಗಳೆಲ್ಲ ಹಳೆಯ ಕಾಲದವಲ್ಲ. ಈಗಲೂ ನಡೆಯುತ್ತಿವೆ. ಆಗ ಹಿಂದೆ ಪರಿಣಾಮವಾದದ್ದು ದೇಶಕ್ಕೆ ಗುಲಾಮತನ. ಈಗ ನಡೆಯುತ್ತಿರುವ ನಮ್ಮವರದೇ ಒಳಸಂಚು, ದ್ರೋಹಗಳಿಂದ ನಮ್ಮ ನಾಡಿಗೆ ಆರ್ಥಿಕ, ಸಾಮಾಜಿಕ, ಗುಲಾಮಗಿರಿ ಬರುತ್ತಿದೆ. ಇಲ್ಲಿ ನಮ್ಮ ಆಡಳಿತಗಾರರದೇ ಕೃತ್ಯ. ಭಾರತ ಮಾತೆಗೆ ಅವಳ ಪುತ್ರರಿಂದಲೇ ಬೆನ್ನಲ್ಲಿ ಇರಿತ. ಗಾಯ ಗೊತ್ತೇ ಆಗದ ಹಾಗೆ ನವಿರಾಗಿ ನಡೆಯುತ್ತಿರುವ ಇರಿತ.

ಇದೆಲ್ಲ ನಡೆಯುತ್ತಿರುವುದು ವಿಶ್ವವಾಣಿಜ್ಯ ಕೂಟದ ಒತ್ತಡಕ್ಕೆ ತಲೆಬಾಗಿ ಅವರು ತೋರಿಸಿದ ಎಡೆಯಲ್ಲಿ ರುಜುಮಾಡಿ, ದೇಶದ ಅರ್ಥವ್ಯವಸ್ಥೆಯನ್ನು ಒತ್ತೆ ಇಡುತ್ತಿರುವ ಆಡಳಿತಗಾರರಿಂದ. ಸ್ವದೇಶಿ ಮಂತ್ರ ಜಪಿಸುತ್ತಿದ್ದ ಪಕ್ಷದ ನಾಯಕತ್ವದಲ್ಲೇ ಈ ಪರಭಾರೆ ನಡೆಯುತ್ತಿರುವುದು ವಿಪರ್ಯಾಸ.

೨೦೦೧–೨ ರ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಈ ದ್ರೋಹದ ಸುಳಿವು ಇತ್ತು. ವಾಣಿಜ್ಯ ಮಂತ್ರಿ ಮುರಸೋಳಿ ಮಾರನ್ ಈಚೆಗೆ ಆ ಸುಳಿವನ್ನು ಸಾಕಾರಗೊಳಿಸುವ ಯೋಜನೆ ಪ್ರಕಟಿಸಿದ್ದಾರೆ. ೮೨೫ ವಿದೇಶಿ ವಸ್ತುಗಳ ಮೇಲೆ ಆಮದು ಸುಂಕ ಕಡಿಮೆ ಆಗಿದೆ. ಪ್ರಮಾಣ ನಿರ್ಬಂಧಗಳೂ ಹೋಗಿವೆ. ಆ ವಸ್ತುಗಳನ್ನು ಈಗ ಲಂಗುಲಗಾಮಿಲ್ಲದೆ ಆಮದು ಮಾಡಿಕೊಳ್ಳಬಹುದು. ಲಾಭದಲ್ಲಿ ನಡೆಯುತ್ತಿದ್ದ ಭಾರತ ಅಲ್ಯೂಮಿನಿಯಂ ಕಂಪೆನಿಯನ್ನು ಈಗಾಗಲೇ ಬಹುರಾಷ್ಟ್ರೀಯ ಸಂಸ್ಥೆಗೆ ಒಪ್ಪಿಸಿಯಾಗಿದೆ. ನಮ್ಮ ಅತ್ಯುತ್ತಮ ಸಾರ್ವಜನಿಕ ಕ್ಷೇತ್ರದ ಉದ್ಯಮಗಳು ಮಾರಾಟಕ್ಕಿವೆ ಎಂಬುದಕ್ಕೆ ಇದು ಸೂಚನೆ.

ಭಾರತೀಯ ಉದ್ಯಮಗಳಿಗೆ ನೆರವಾಗಲಿ ಎಂದು ಮೊದಲು ಕೆಲವು ವಸ್ತುಗಳ ಮೇಲೆ ನಿರ್ಬಂಧವಿತ್ತು. ಇವೆಲ್ಲವನ್ನು ೨೦೦೫ ರ ವೇಳೆಗೆ ತೆಗೆಯುವಂತೆ ವಿಶ್ವವ್ಯಾಪಾರ ಸಂಸ್ಥೆಯ ಆದೇಶ. ಈ ಹಿಂದೇಯೆ ೧೦೦೦ ದಷ್ಟು ವಸ್ತುಗಳ ಮೇಲಿನ ನಿರ್ಬಂಧ ಹೋಗಿತ್ತು. ಈಗ ಇನ್ನಷ್ಟು ವಸ್ತುಗಳು ಮುಕ್ತವಾಗಿವೆ.

ಗಡುವಿಗೆ ಮೊದಲೇ ನಿರ್ಬಂಧ ತೆಗೆಯುವ ಔದಾರ್ಯ ನಮ್ಮ ಮಂತ್ರಿಗಳಿಗೆ. ಇನ್ನು ಮುಂದೆ ವಿದೇಶಿ ಪೈಪೋಟಿ ಇಲ್ಲದ ಯಾವ ವಸ್ತುವೂ ಪ್ರಾಯಶಃ ಇರುವುದಿಲ್ಲ.

ಬ್ರಿಟಿಷರು ಬಂದಾಗ ತಮ್ಮ ಗಿರಣಿಗಳ ಅಗ್ಗದ ಬಟ್ಟೆ ತಂದು ನಮ್ಮ ನೂಲುವ – ನೇಯುವ ಉದ್ಯಮವನ್ನು ಕೊಂದು ಹಾಕಿದರು. ಲಕ್ಷಗಟ್ಟಲೆ ನೂಲುಗಾರರು – ನೇಕಾರರು ಹೊಟ್ಟೆಗಿಲ್ಲದೆ ಸತ್ತರು. ಹೇಗೋ ಉಳಿದುಕೊಂಡಿದ್ದವರು, ಈಗ ಈ ಹೊಸ ಅರ್ಥವ್ಯವಸ್ಥೆಯಿಂದಾಗಿ ನಮ್ಮವರಿಂದಲೇ ಸಾವಿನ ಕೂಪಕ್ಕೆ ಬೀಳುವಂತಾಗುತ್ತಿದೆ. ರೈತರ, ಕಾರ್ಮಿಕರ ಆತ್ಮಹತ್ಯೆ ಆಗಲೇ ನಡೆಯುತ್ತಲೇ ಇದೆ. ನಮ್ಮ ಮೀನುಗಾರಿಕೆಯೂ ವಿದೇಶಿಯರ ಯಂತ್ರದ ಪಾಲಾಗುವಂತೆ ಅವಕಾಶ ಕಲ್ಪಿಸಲಾಗಿದೆ.

ಈ ಹೊಸ ವ್ಯವಸ್ಥೆ ಬಂದು ಹೆಚ್ಚೂ-ಕಡಿಮೆ ೧೦ ವರ್ಷ ಆಗಿದೆ. ಇಷ್ಟರಲ್ಲೇ ಕನಿಷ್ಠ ಪಕ್ಷ ಒಂದೂವರೆ ಲಕ್ಷ ಸಣ್ಣ ಉದ್ಯಮಗಳು ಮುಚ್ಚಿವೆ. ೧೫೦ ಲಕ್ಷಕ್ಕೂ ಹೆಚ್ಚಿನ ಶ್ರಮಿಕರು ಬೀದಿಪಾಲಾಗಿದ್ದಾರೆ. ಈಗ ಇನ್ನೂ ಅಷ್ಟು ಜನಕ್ಕೆ ಅದೇ ನೇಣು ಸಿದ್ಧವಾಗಿದೆ. ನಮ್ಮ ರೈತರು ವಿದೇಶದಲ್ಲಿ ಸ್ಪರ್ಧಿಸುವಂತೆ ಕುಮ್ಮಕ್ಕು ಕೊಡುವುದಾಗಿ ವಾಣಿಜ್ಯ ಮಂತ್ರಿ ಹೇಳುತ್ತಾರೆ. ಇದು ಎಷ್ಟು ನಿಜ? ನಮ್ಮ ಬಡ ರೈತನೆಲ್ಲಿ, ಕೊಬ್ಬಿದ ವಿದೇಶದ ಉದ್ಯಮಿ ಎಲ್ಲಿ? ಆಡು ಎಲ್ಲಿ, ಆನೆ ಎಲ್ಲಿ ?

ಕೆಲವು ಬೃಹತ್ ಉದ್ಯಮಿಗಳ ಬಾಯಿಗೆ ಸಿಹಿ ಇಟ್ಟಿದ್ದಾರೆ ವಾಣಿಜ್ಯ ಮಂತ್ರಿ. ಮೋಟಾರುಕಾರು ಉದ್ಯಮಿಗಳಿಗೆ ಅನುಕೂಲವಾಗುವಂತೆ ಅವುಗಳ ಆಮದು ಸುಂಕ ಏರಿಸಿ ಸ್ಥಳೀಯ ವಾಹನಗಳಿಗೆ ಸ್ಪರ್ಧೆ ತಗ್ಗಿಸಿದ್ದಾರೆ. ಅದೇ ರೀತಿ, ವಿದೇಶಿ ಅಥವಾ ಬಹುರಾಷ್ಟ್ರೀಯ ಕಂಪೆನಿಗಳ ಎಂಜಲು ಕಾಸಿಗೆ ಕೈ ಒಡ್ಡುವ ನಮ್ಮವರೇ ಆದ ಕೆಲವರಿಗೂ ಈ ಹೊಸ ನೀತಿ ಮೂಗಿಗೆ ತುಪ್ಪ ಹಚ್ಚಿದೆ. ಇದನ್ನೇ ತಮ್ಮ ಧೋರಣೆಗೆ ಬೆಂಬಲವಾಗಿ ಬೆಳೆಸಿಕೊಳ್ಳುತ್ತಿದೆ ಪ್ರಭುತ್ವ. ಆದರೆ ಇದೆಲ್ಲ ನಮ್ಮ ರೈತರಿಗೆ, ಕುಶಲ ಕರ್ಮಿಗಳಿಗೆ, ಶ್ರಮಿಕರಿಗೆ, ಮಹಿಳೆಯರಿಗೆ, ದಲಿತರಿಗೆ ಆದಿವಾಸಿಗಳಿಗೆಲ್ಲ ವಿಷಪ್ರಾಯವೇ. ನಿರುದ್ಯೋಗ, ಹಸಿವು, ಆತ್ಮಹತ್ಯೆ, ಸಾವು, ದಾರಿದ್ರ್ಯ ಹೆಚ್ಚಿಯಾವೇ ಊಹಿಸುವುದೂ ಕಷ್ಟ. ೧೯೪೩ ರ ಬಂಗಾಲದ ಕ್ಷಾಮ ನಾಲ್ಕೂವರೆ ಲಕ್ಷ ಜನರನ್ನು ಬಲಿ ತೆಗೆದುಕೊಂಡಿತು. ಈಗ ಬಲಿ ಇನ್ನೂ ಹೆಚ್ಚುವುದು ಖಂಡಿತ.

ಈ ಸ್ವಜನ ದ್ರೋಹದ ವಿರುದ್ಧ ನಮ್ಮ ನಾಡಪ್ರೇಮಿಗಳೆಲ್ಲ "ಮಾಡು ಇಲ್ಲವೇ ಮಡಿ" ಹೋರಾಟ ಮಾಡಿ, ಆಳರಸರನ್ನು ಕಿತ್ತೊಗೆದು ಧೋರಣೆಗಳನ್ನು ಬದಲಾಯಿಸಬೇಕಾದ ತುರ್ತು ಅಗತ್ಯ ಬಂದಿದೆ. ★

ಜನಪದ ಸಂಗತಿ................

ಬಳ್ಳಾರಿ ತಾಲ್ಲೂಕಿನ ವಣನೂರು ಗ್ರಾಮದಲ್ಲಿ ಕಳೆದ ಆಗಸ್ಟ್ ೨೬ ಒಂದು ಹಿಂದುಳಿದ ವರ್ಗ ಇನ್ನೊಂದು ಹಿಂದುಳಿದ ವರ್ಗದ ಮಹಿಳೆಯನ್ನು ಬೆತ್ತಲೆ ಮಾಡಿ ಮೆರವಣಿಗೆ ಮಾಡಿಸಿದೆ. ಈ ಕುರಿತು ಹಿನ್ನೆಲೆಯಲ್ಲಿರುವ ಕಾರಣಗಳನ್ನು ನೋಡಿದರೆ ಅದು ಕೇವಲ ಒಂದು ಸಾಮಾಜಿಕ, ಪ್ರಕೃತಿ ಸಹಜವಾದ ಪ್ರೇಮದ ವಿಷಯ; ಆದರೆ ಜನ ಕೈಗೊಂಡ ಕ್ರಮ ಅಮಾನುಷ, ಬರ್ಬರ, ತುಚ್ಛ, ಹೇಯ, ನಾಚಿಕೆರಹಿತ, ಧಿಕ್ಕಾರಕ್ಕೆ ಯೋಗ್ಯ ಮತ್ತು ಖಂಡನೀಯ. ಮನುಷ್ಯನು ಕೋಪದ ಭರದಲ್ಲಿ ಹೇಗೆ ತನ್ನ ಬುದ್ಧಿಯ ಸಮತೋಲನವನ್ನು ಕಳೆದುಕೊಳ್ಳುತ್ತಾನೆ ಎಂಬುದಕ್ಕೆ ಇದೊಂದು ತಾಜಾ ಉದಾಹರಣೆ. ಈಗ್ಗೆ ಕೆಲವು ದಿನಗಳ ಹಿಂದೆ ಉತ್ತರ ಭಾರತದ ಒಂದು ಹಳ್ಳಿಯಲ್ಲಿ ಸವರ್ಣೀಯರ ಬೇರೆ-ಬೇರೆ ಜಾತಿಗೆ ಸೇರಿದ ಹುಡುಗ-ಹುಡುಗಿ ಪ್ರೇಮಿಸಿ ವಿವಾಹವಾದದ್ದಕ್ಕಾಗಿ ಅವರಿಬ್ಬರನ್ನು ಗ್ರಾಮಸ್ಥರೇ ಬಹಿರಂಗವಾಗಿ ನೇಣು ಹಾಕಿದರೆಂಬುದನ್ನು ಕೇಳಿದ್ದೆವು. ಈ ಸಂಗತಿಗಳಿಗೆ ಕಾರಣ ಪ್ರೇಮ ವಿವಾಹದ ವಿಷಯಗಳಾಗಿದ್ದರೂ ಸಹ ಇವು ಮೇಲು ಜಾತಿ ಕೀಳು ಜಾತಿಗಳ ರೂಪವನ್ನು ಪಡೆದು ಅಮಾನುಷ ಘಟನೆಗಳಿಗೆ ಕಾರಣವಾಗುತ್ತಿರುವುದು ಎಲ್ಲ ಸಾಮಾಜಿಕ ಹಿತಚಿಂತಕರು ಯೋಚಿಸಬೇಕಾದ ವಿಷಯ. ಕಾನೂನು ಪಂಡಿತರೂ ಸಹ ಆಲೋಚಿಸಬೇಕಾದ ವಿಷಯ. ಇಂಥ ಹೇಯ ಕೃತ್ಯಗಳು ನಡೆದಾಗ ಜಾತಿಗಳ ವಿಷಯವೇ ಪ್ರಮುಖವಾಗಿ ಪ್ರಸ್ತಾಪಿಸಲ್ಪಡುತ್ತದೆಯೇ ಹೊರತು ಈ ಕೃತ್ಯಗಳು ಇಡೀ ಸಮಾಜದ ಇಂದಿನ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗೆ ಹಿಡಿದ ಕನ್ನಡಿ ಎಂಬುದನ್ನು ಮರೆಯಲಾಗುತ್ತದೆ.

ವಣನೂರು ಘಟನೆಯಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದುದು ಒಬ್ಬ ಮಹಿಳೆಗೆ ಆದ ಅಪಮಾನ ಇಡೀ ಸಮಾಜಕ್ಕೇ ಆದ ಅಪಮಾನವೆಂಬ ಗ್ರಹಿಕೆ. "ದಲಿತ ಮಹಿಳೆಗೆ ಅಪಮಾನ" ಎಂಬ ಶೀರ್ಷಿಕೆ ಅಪಮಾನವನ್ನೂ ಸಹ ಒಂದು ಜಾತಿಗೆ ಸೇರಿಸಿದಂತಾಗುತ್ತದೆ. ಈ ರೀತಿಯ ದೃಷ್ಟಿಕೋನ, ಆಲೋಚನೆ ಎಳ್ಳಷ್ಟೂ ಸರಿಯಲ್ಲ. ಯಾವುದೇ ಒಂದು ಸಾಮಾಜಿಕ ದುರ್ಘಟನೆ ನಡೆದಾಗ ಅದು ಯಾರ ಬಗ್ಗೆ ನಡೆಯಿತು, ಯಾರಿಂದ ನಡೆಯಿತು ಇತ್ಯಾದಿಗಳನ್ನು ಗಮನಿಸುವಾಗ ಜಾತಿಯನ್ನೇ ಪ್ರಧಾನವನ್ನಾಗಿಟ್ಟುಕೊಂಡಾಗ ಆ ದುರ್ಘಟನೆಯ ವಿರುದ್ಧ ಇಡೀ ಸಮಾಜ ಸಿಡಿದೇಳುವ ಬದಲು ಕೇವಲ ಆ ಜಾತಿಗೆ ನೇರವಾಗಿ ಸಂಬಂಧಿಸಿದ ಕೆಲವರು ಮಾತ್ರ

ಆಕ್ರೋಶ ತೋರಿಸುವಂತಾಗುತ್ತದೆ. ಇದು ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಸಲ್ಲುವಂಥದಲ್ಲ. ಅನ್ಯಾಯ, ಅಪಮಾನ, ಅಸತ್ಯ, ಶೋಷಣೆ ಮುಂತಾದವುಗಳು ಎಲ್ಲ ಜಾತಿ-ಜನಾಂಗ-ದೇಶ ಮೀರಿದಂಥ ವಿಷಯಗಳು. ಇವು ಎಲ್ಲಿಯೇ ತಲೆ ಎತ್ತಲಿ ಅವುಗಳನ್ನು ಹತ್ತಿಕ್ಕಬೇಕಾದುದು ಎಲ್ಲ ಸುಸಂಸ್ಕೃತರ, ಸುವಿಚಾರಕರ, ಸುಪ್ರಜೆಗಳ ಕರ್ತವ್ಯ.

★

ಸಮಾಜದಲ್ಲಿರುವ ನೂರಾರು ಪ್ರಕಾರದ ಒಡಕುಗಳಲ್ಲಿ ಧರ್ಮ ವಿಚಾರದ ಒಡಕಗಳೂ ಸೇರಿವೆ. ಧರ್ಮದ ಹೆಸರಿನಲ್ಲಿ ಯುದ್ಧಗಳು ಆಗುತ್ತವೆ, ದೇಶಗಳು ಒಡೆಯುತ್ತವೆ, ರಕ್ತ ಹರಿಯುತ್ತದೆ. ಆದರೂ ಎಲ್ಲ ಧರ್ಮಗಳ ಸಮನ್ವಯದ ಪ್ರಯತ್ನವೂ ಸಹ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಮನುಷ್ಯ ಆಸೆಯ ನೆರಳಲ್ಲಿ ಬದುಕುತ್ತಾನೆ. ಇಂಥ ಒಂದು ಉದಾಹರಣೆ ಪ್ರೊ॥ ಕೆ. ಆರ್. ಶ್ರೀನಿವಾಸ್ ಅಯ್ಯರ್ ಅವರದು. ಅವರು ಕರಾಚಿ ವಿಶ್ವವಿದ್ಯಾಲಯದಲ್ಲಿ ಗಣಿತ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ತಮ್ಮ ವೃತ್ತಿಯೊಂದಿಗೆ ಅಲ್ಲಿಯ ಮುಸ್ಲೀಂರಿಗೆ ಭಗ್ವದ್‌ಗೀತೆಯ ತರಗತಿಗಳನ್ನು ನಡೆಸುತ್ತಿದ್ದರು. ಅವರಿಗೆ ತುಂಬ ಸಂತೋಷ ತಂದ ಸಂಗತಿಯೇನೆಂದರೆ ಅವರ ಮುಸ್ಲೀಂ ಶಿಷ್ಯರು ಕುರಾಣ್ ಮತ್ತು ಗೀತೆಯ ಬೋಧನೆಗಳಲ್ಲಿರುವ ಸಮಾನ ಅಂಶಗಳನ್ನು ಎತ್ತಿ ತೋರಿಸುತ್ತಿದ್ದುದು. ಪ್ರೊ॥ ಶ್ರೀನಿವಾಸ್ ಅಯ್ಯರ್‌ವರಂಥ ಜೀವಿಗಳ ಸಂಖ್ಯೆ ಬೆಳೆಯಲಿ! ★

KA-SKMND-470/-2000.

Regd I o. KAR/KAN/2000/3820

Vol 2 Issue 2.

ತೆರದ-ಅಂಚೆ

Janapada Vichara - Kannada Monthly Digest Edited and Printed by Surendra Koulagi at Janapada Seva Trust Printing Press, Melkote on behalf of Janapada Seva Trust, (Regd) Melkote, Dist - Mandya 571 431.

Phone : 08236/48754